# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಮಾರ್ಚ್ 9, 2025

ಸಂಪುಟ : 51 ಸಂಚಿಕೆ : 296 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







# ಮದುವೆಯಾಗುವ ಹೆಣ್ಣು ಮಕ್ಕಳಿಗೆ ಹೆತ್ತವರು ತಿಳಿವಳಿಕೆ ಮೂಡಿಸಲಿ

## ಲೋಕ ಅದಾಲತ್‌ನಲ್ಲಿ ಮತ್ತೆ ಒಂದಾದ 39 ಜೋಡಿಗಳು, ಶುಭ ಹಾರೈಕೆ



ದಾವಣಗೆರೆ, ಮಾ.8- ಜಿಲ್ಲೆಯಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಒಟ್ಟು 39 ವೈವಾಹಿಕ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜೀ ಸಂಧಾನ ಮಾಡಿ ಸತಿ-ಪತಿ ಒಂದಾಗಿ ಸಹಬಾಳ್ವೆ ಮಾಡಲು ಅವಕಾಶ ಮಾಡಿಕೊಡಲಾಯಿತು.

ದಾವಣಗೆರೆ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಮತ್ತು ಜೀವನಾಂಶಕ್ಕಾಗಿ ಪ್ರಕರಣ ದಾಖಲಿಸಿದ್ದ 34 ಜೋಡಿಗಳು ಒಂದಾಗಿ ಮತ್ತೊಮ್ಮೆ ಸಹಬಾಳ್ವೆ ನಡೆಸಲು ತೆರಳಿದರು. ಹರಿಹರ ತಾಲ್ಲೂಕು ನ್ಯಾಯಾಲಯಗಳಲ್ಲಿ ಎರಡು, ಚನ್ನಗಿರಿ, ಹೊನ್ನಾಳಿ, ಜಗಳೂರು ತಾಲ್ಲೂಕು ನ್ಯಾಯಾಲಯಗಳಲ್ಲಿ ತಲಾ ಒಂದು ಪ್ರಕರಣದಲ್ಲಿ ವಿವಾಹ ವಿಚ್ಛೇದನ ಮತ್ತು ಜೀವನಾಂಶಕ್ಕಾಗಿ ಪ್ರಕರಣ ದಾಖಲಾಗಿತ್ತು.

ಒಂದಾದ ಜೋಡಿಗಳಿಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಸೇರಿ ಎಲ್ಲ ನ್ಯಾಯಾಧೀಶರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮತ್ತೆ ಒಂದಾದ ಜೋಡಿಗಳಿಗೆ ಗುಲಾಬಿ ಹೂವು ನೀಡಿ ಸುಖೀ ಜೀವನ ನಡೆಸುವಂತೆ ಹಾರೈಸಿದರು.

ಈ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಮಾತನಾಡಿ, "ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಪ್ರಕರಣ ಇತ್ಯರ್ಥ ಮಾಡಿಕೊಳ್ಳುವುದರಿಂದ ಶೀಘ್ರದಲ್ಲಿ ನ್ಯಾಯ ತೀರ್ಮಾನ ಆಗಲಿದೆ" ಎಂದರು.

ಕೌಟುಂಬಿಕ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಶಿವಪ್ಪ ಗಂಗಪ್ಪ ಸಲಗೆರೆ ಮಾತನಾಡಿ, "ನಾಲ್ಕು ಲೋಕ್ ಅದಾಲತ್‌ನಲ್ಲಿ ಒಟ್ಟು 96 ಜೋಡಿಗಳನ್ನು ಮತ್ತೆ ಒಂದು ಮಾಡಿ ಕಳುಹಿಸಿದ್ದೇವೆ. ಬೇರೆಯವರ ಮನೆಗೆ ಹೋಗುವ ಹೆಣ್ಣುಮಕ್ಕಳಿಗೆ ತಂದೆ-ತಾಯಿ ತಿಳಿವಳಿಕೆ ನೀಡುವುದು ಉತ್ತಮ" ಎಂದರು.

ಎಸ್ಪಿ ಉಮಾ ಪ್ರಶಾಂತ್ ಮಾತನಾಡಿ, "ಯಾವುದೇ ಕುಟುಂಬ ಚೆನ್ನಾಗಿ ನಡೆಯಬೇಕಾದರೆ ಹೆಣ್ಣುಮಗಳ ಪಾತ್ರ ಮುಖ್ಯವಾಗಿದೆ" ಎಂದರು.

ನ್ಯಾಯಾಶರಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯ, ಆರ್.ಎನ್ ಪ್ರವೀಣ್ ಕುಮಾರ್, ಶ್ರೀರಾಮ ನಾರಾಯಣ ಹೆಗಡೆ, ಟಿ.ಎಂ. ನಿವೇದಿತ, ಎಚ್.ಡಿ. ಗಾಯತ್ರಿ, ನಾಜಿಯಾ ಕೌಸರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಎಚ್. ಅರುಣಕುಮಾರ್, ಭಾಗ್ಯಲಕ್ಷ್ಮಿ ಮತ್ತಿತರರಿದ್ದರು.

### ಜಾರಿಯಲ್ಲಿದ್ದ 10,186 ಪ್ರಕರಣಗಳು ಇತ್ಯರ್ಥ

ಲೋಕ ಅದಾಲತ್‌ನಲ್ಲಿ ಒಟ್ಟು 109 ಅಪರಾಧ ಪ್ರಕರಣಗಳು, 148 ಚೆಕ್ ಅಮಾನ್ಯ ಪ್ರಕರಣಗಳು, 31 ಬ್ಯಾಂಕ್ ವಸೂಲಾತಿ ಪ್ರಕರಣಗಳು, 16 ಇತರೆ ಹಣ ವಸೂಲಾತಿ, 47 ಅಪಘಾತ ಪರಿಹಾರ ಪ್ರಕರಣಗಳು, 91 ವಿದ್ಯುತ್ ಕಳ್ಳತನದ ಪ್ರಕರಣಗಳು, 7ಅಕ್ರಮ ಮರಳು ಗಣಿಗಾರಿಕೆ ಪ್ರಕರಣಗಳು, 57 ಪಾಲು ವಿಭಾಗಕ್ಕಾಗಿ ದಾಖಲಿಸಿದ ದಾವೆಗಳು, 20 ಭೂ ಸ್ವಾಧೀನ ಪರಿಹಾರ ಜಾರಿ ಅರ್ಜಿಗಳು, 138 ಇತರೆ ಜಾರಿ ಅರ್ಜಿಗಳು ಅಲ್ಲದೆ ಹಲವು ಕಾರಣಕ್ಕಾಗಿ ದಾಖಲಿಸಿದ 87ದಾವೆಗಳು ಮತ್ತು ಜೀವನಾಂಶ ಕೋರಿ ದಾಖಲಿಸಿದ್ದ ದಾವೆಗಳು 37 ರಾಜೀ ಮೂಲಕ ಇತ್ಯರ್ಥಗೊಂಡಿವೆ. ಇದಲ್ಲದೇ ಇತರೆ ಪ್ರಕರಣಗಳು ಸೇರಿ ಒಟ್ಟು 10,186 ಜಾರಿಯಲ್ಲಿದ್ದ ಪ್ರಕರಣಗಳು ಇತ್ಯರ್ಥಗೊಂಡಿವೆ.

ಜಿಲ್ಲೆಯಲ್ಲಿ ಒಟ್ಟು 10,186 ಜಾರಿಯಲ್ಲಿರುವ ಪ್ರಕರಣಗಳು ಮುಕ್ತಾಯಗೊಂಡು 12,84,45,304 ರೂ. ಪರಿಹಾರ ಕೊಡಿಸಲಾಗಿದೆ. 1,87,029 ವ್ಯಾಜ್ಯಪೂರ್ವ ಪ್ರಕರಣಗಳು ಮುಕ್ತಾಯಗೊಂಡು 18,79,55,146 ರೂ. ಪರಿಹಾರ ಕೊಡಿಸಲಾಗಿದೆ.

ವ್ಯಾಜ್ಯ ಪೂರ್ವ (2ನೇ ಪುಟಕ್ಕೆ)

# ಪ್ರಭಾವಿಗಳಿಗೆ ರನ್ಯಾ ಕಂಟಕ



### ಚಿನ್ನ ಕಳ್ಳಸಾಗಾಣಿಕೆ ಪ್ರಕರಣ ಸಿಬಿಐಗೆ

ಬೆಂಗಳೂರು, ಮಾ. 8 - ಚಿತ್ರನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣವನ್ನು ಸಿಬಿಐ ವಹಿಸಿಕೊಂಡಿದ್ದು, ಈ ಪ್ರಕರಣ ಕೆಲವು ಪ್ರಭಾವಿಗಳ ಕೊರಳಿಗೆ ಉರುಳಾಗುವ ಲಕ್ಷಣಗಳು ಕಂಡುಬರುತ್ತಿವೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.

ಚಿನ್ನ ಕಳ್ಳಸಾಗಣೆಯಲ್ಲಿ ಪ್ರಭಾವೀ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ದಿಮೆದಾರರು ಶಾಮೀಲಾಗಿದ್ದಾರೆಂದು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ನೀಡಿದ ಪ್ರಾಥಮಿಕ ವರದಿ ಆಧಾರದ ಮೇಲೆ ದೆಹಲಿ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ.

ರನ್ಯಾ ರಾವ್ ಅವರನ್ನು ಡಿಆರ್‌ಐ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಆರೋಪಿ ಕೆಲವು ಸ್ಫೋಟಕ ಮಾಹಿತಿ ನೀಡುತ್ತಿದ್ದಂತೆ ಸಂದೇಶ ರವಾನೆ ಮಾಡಿತ್ತು.

ಕೇಂದ್ರ ತನಿಖಾ ಸಂಸ್ಥೆಗಳು ತಕ್ಷಣವೇ ಡಿಆರ್‌ಐ ಕಸ್ಟಡಿಯಲ್ಲಿರುವ ರಾವ್ ಅವರನ್ನು ವಿಚಾರಣೆ ಮಾಡಿ ಮಾಹಿತಿ ಪಡೆದ ನಂತರ ಸಿಬಿಐ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿ ಕೊಂಡಿತು. ಚಿನ್ನ ಕಳ್ಳಸಾಗಣೆ ಪ್ರಕರಣವನ್ನು ಸಿಬಿಐ ವಹಿಸಿಕೊಂಡಿರುವುದರಿಂದ ಕರ್ನಾಟಕ ರಾಜಕೀಯದಲ್ಲೂ ಮುಂದಿನ ದಿನಗಳಲ್ಲಿ ಮಹತ್ತರ ತಿರುವು ಪಡೆದುಕೊಳ್ಳಲಿದೆ ಎನ್ನಲಾಗಿದೆ.

ಯಾವುದೇ ಪ್ರಕರಣವನ್ನು ಸಿಬಿಐ ತನಿಖೆಗೆ ಮುಕ್ತ ಅವಕಾಶ ನೀಡದಿರುವ ಕರ್ನಾಟಕ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ಗುಪ್ತಚರ ವಿಭಾಗ ನೀಡಿದ ದೂರು ದಾಖಲಿಸಿಕೊಂಡು ದೆಹಲಿ ಸಿಬಿಐ ತನಿಖೆ ಕೈಗೆತ್ತಿಕೊಂಡಿದೆ.

ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ಇ.ಡಿ. ಕೂಡಾ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆಯಿಂದ, ಅಗೆದಷ್ಟೂ ದೊಡ್ಡ ದೊಡ್ಡ ಕುಳಗಳು ರನ್ಯಾ ರಾವ್ ಜೊತೆಗೆ ನಂಟು ಹೊಂದಿರುವುದು ಬೆಳಕಿಗೆ ಬರುತ್ತಿದೆ.

ಕಪ್ಪು ಹಣವನ್ನು ಬಿಳಿಯಾಗಿ ಪರಿವರ್ತಿಸಲು ಚಿನ್ನ ಕಳ್ಳಸಾಗಣೆಗೆ ಬಳಕೆ ಮಾಡಿಕೊಳ್ಳಲಾಗುತ್ತಿತ್ತು ಎಂದು ಡಿಆರ್‌ಐ, ಇ.ಡಿ. ಮತ್ತು ಸಿಬಿಐಗೆ ದೂರು ನೀಡಿತ್ತು. ರನ್ಯಾ ರಾವ್ ಅವರಿಂದ ಕಳೆದ ನಾಲ್ಕು ದಿನಗಳ ಹಿಂದೆ ಕಂದಾಯ ಗುಪ್ತಚರ ನಿರ್ದೇಶನಾಲಯ ಅನೇಕ ಮಾಹಿತಿಗಳನ್ನು ಕಲೆ ಹಾಕಿ ಅಪಾರ ಪ್ರಮಾಣದ ಚಿನ್ನ ಮತ್ತು ಕೋಟ್ಯಂತರ ರೂ.ಗಳನ್ನು ವಶಕ್ಕೆ ಪಡೆದಿದೆ.

ಆರೋಪಿ ನೀಡಿರುವ ಮಾಹಿತಿ, ಕೇಂದ್ರೀಯ ತನಿಖಾಧಿಕಾರಿಗಳನ್ನೇ ದಿಗ್ಭ್ರಮೆಗೊಳಿಸಿದೆ. ಈ ಜಾಲದ ಹಿಂದೆ ಪ್ರಭಾವೀ ರಾಜಕಾರಣಿಗಳು (2ನೇ ಪುಟಕ್ಕೆ)

# ಸಿದ್ದರಾಮಯ್ಯ, ಡಿಕೆಶಿ ಒಂದಾಗಲಿ



### ಖರ್ಗೆ ಕಿವಿಮಾತು

ಕಲಬುರಗಿ, ಮಾ. 8 - ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಂದಾಗಿ ಒಳ್ಳೆಯ ಕೆಲಸ ಮಾಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿವಿಮಾತು ಹೇಳಿದ್ದಾರೆ.

ಜೇವರ್ಗಿ ತಾಲೂಕಿನ ಕಟ್ಟಿ ಸಂಗಾವಿ ಬಳಿ ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯ ಕಲ್ಯಾಣ ಪಥ ಯೋಜನೆಯ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿದ್ಧರಾಮಯ್ಯ ಹಾಗೂ ಶಿವಕುಮಾರ್ ಒಂದಾಗಿ ರಾಜ್ಯದ ಅಭಿವೃದ್ಧಿ ಕೆಲಸ ಮಾಡಿ. ಅಭಿವೃದ್ಧಿ ಬಿಟ್ಟು ಹೋದರೆ ಜನ ಮೆಚ್ಚುವುದಿಲ್ಲ. ಭಿನ್ನ-ಭಿನ್ನ ಹಾದಿಯಲ್ಲಿ ಹೋದರೆ ಏನೂ ಮಾಡಲಿಕ್ಕಾಗದು ಎಂದು ಹೇಳಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶಿವಕುಮಾರ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಪಕ್ಷದಲ್ಲಿ ಸತತ ಒಳ್ಳೆಯ ಕೆಲಸ ಮಾಡಿದವರಿಗೆ ಪ್ರೋತ್ಸಾಹ ಸಿಕ್ಕೇ ಸಿಗುತ್ತದೆ. ಸಿದ್ಧರಾಮಯ್ಯ ಒಳ್ಳೆಯ ಬಜೆಟ್ ಮಂಡಿಸಿದ್ದಾರೆ. ದೇಶದಲ್ಲಿ ಹಣಕಾಸು ಸಚಿವರಾಗಿ 16 ಬಜೆಟ್ ಮಂಡಿಸಿದವರು ಯಾರಾದರೂ ಇದ್ದಾರೆಂದರೆ ಅದು ಸಿದ್ಧರಾಮಯ್ಯ ಮಾತ್ರ. ಅದೇ ರೀತಿ ಉಪಮುಖ್ಯಮಂತ್ರಿಯಾಗಿ ಶಿವ ಕುಮಾರ್ ಸಹ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಧಾನ ಮಂತ್ರಿ (2ನೇ ಪುಟಕ್ಕೆ)

# ಜಿಎಸ್ಟಿ ದರ ಕಡಿಮೆಯಾಗಲಿದೆ

ಮುಂಬೈ, ಮಾ. 8 – ಜಿ.ಎಸ್.ಟಿ. ದರಗಳು ಇನ್ನಷ್ಟು ಕಡಿಮೆಯಾಗಲಿವೆ. ತೆರಿಗೆ ದರ ಹಾಗೂ ಹಂತಗಳನ್ನು ಪರಿಷ್ಕರಿಸುವ ಪ್ರಕ್ರಿಯೆ ಬಹುತೇಕ ಅಂತಿಮ ಹಂತಕ್ಕೆ ಬಂದಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಜುಲೈ 1, 2017ರಲ್ಲಿ ಜಿ.ಎಸ್.ಟಿ. ತೆರಿಗೆ ಪದ್ಧತಿ ಆರಂಭವಾದಾಗ ತಟಸ್ಥ ಆದಾಯ ದರ ಶೇ.15.8ರಷ್ಟಿತ್ತು. ಅದು 2023ರಲ್ಲಿ ಶೇ.11.4ಕ್ಕೆ ಬಂದಿದೆ. ಇದು ಇನ್ನಷ್ಟು ಕಡಿಮೆಯಾಗಲಿದೆ ಎಂದವರು ಹೇಳಿದ್ದಾರೆ.

# ಅಮೆರಿಕ-ಭಾರತದ ವ್ಯಾಪಾರಿ ಒಪ್ಪಂದದ ಬಗ್ಗೆ ಮಾತು ಈಗ ಅವಸರ

ನವದೆಹಲಿ, ಮಾ. 8 – ವ್ಯಾಪಾರಿ ಒಪ್ಪಂದದ ಬಗ್ಗೆ ಭಾರತ ಹಾಗೂ ಅಮೆರಿಕದ ನಡುವೆ ಈಗಷ್ಟೇ ಮಾತುಕತೆ ಆರಂಭವಾಗಿದೆ. ಹೀಗಾಗಿ ಈಗಲೇ ತೆರಿಗೆ ಕಡಿತದ ಕುರಿತು ಮಾತನಾಡುವುದು ಅವಸರವಾಗಲಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಅಮೆರಿಕದ ಉತ್ಪನ್ನಗಳ ಮೇಲೆ ವಿಧಿಸಲಾಗುವ ತೆರಿಗೆಗಳನ್ನು ಕಡಿತಗೊಳಿಸಲು (2ನೇ ಪುಟಕ್ಕೆ)

# ಕಿರುವಾಡಿ ಗಿರಿಜಮ್ಮ ಅವರಿಗೆ 'ವನಿತಾ ಸೇವಾ ಪ್ರಶಸ್ತಿ' ಪ್ರದಾನ



ದಾವಣಗೆರೆ, ಮಾ. 8- ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಗೈದಿದ್ದು, ಸಮಾಜದ ಏಳಿಗೆಗೆ ಸದಾ ಶ್ರಮಿಸುತ್ತಿದ್ದು, ಈ ನಿಟ್ಟಿನಲ್ಲಿ ವನಿತಾ ಸಮಾಜ, ಅಕ್ಕಮಹಾದೇವಿ ಸಮಾಜ, ಮಹಿಳಾ ಸೇವಾ ಸಮಾಜಗಳ ಸೇವಾ ಕಾರ್ಯಗಳು ಶ್ಲಾಘನೀಯವಾದವು ಎಂದು ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಉಪಾಧ್ಯಕ್ಷೆ ಕಿರುವಾಡಿ ಗಿರಿಜಮ್ಮ ಹೇಳಿದರು.

ನಗರದ ವನಿತಾ ಸಮಾಜದ ಆವರಣದಲ್ಲಿರುವ ಸತ್ಯಸಾಯಿ ರಂಗಮಂದಿರದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಮಹಿಳಾ ಉತ್ಸವ ಹಾಗೂ ವನಿತಾ ಸಮಾಜದ ವಾರ್ಷಿಕೋತ್ಸವ ಸಮಾರಂಭದಲ್ಲಿ 'ವನಿತಾ ಸೇವಾ ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ದಾವಣಗೆರೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ ಬಳ್ಳಾರಿ ಸಿದ್ಧಮ್ಮ, ನಾಗಮ್ಮ ಕೇಶವಮೂರ್ತಿ ಸೇರಿದಂತೆ ಅನೇಕ ಮಹಿಳೆಯರು ಸಮಾಜದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಸಾಹಸಿ, ಧೈರ್ಯಶಾಲಿ, ದಿಟ್ಟತನದ ನಾಗಮ್ಮ ಕೇಶವಮೂರ್ತಿ ಅವರು ವನಿತಾ ಸಮಾಜವನ್ನು ಮತ್ತು ಅದರ ಅನೇಕ ಅಂಗ ಸಂಸ್ಥೆಗಳನ್ನು ಕಟ್ಟಿ ಬಹಳಷ್ಟು ಮಹಿಳೆಯರ ಜೀವನಕ್ಕೆ ದಾರಿದೀಪವಾಗಿದ್ದಾರೆ. ಅವರ ಸೇವೆ ಸ್ಮರಣೀಯ ಎಂದರು.

ಮಹಿಳೆಯರು ಒಗ್ಗಟ್ಟಿನಿಂದ ಕೆಲಸ (2ನೇ ಪುಟಕ್ಕೆ)

# ಒಂದು ಹತ್ಯೆ ಮಾಡಲು ಮಹಿಳೆಗೆ ಹಕ್ಕು ಕೊಡಿ

### ರಾಷ್ಟ್ರಪತಿಗೆ ಎನ್.ಸಿ.ಪಿ. (ಎಸ್‌ಪಿ) ಒತ್ತಾಯ

ಮುಂಬೈ, ಮಾ. 8 - ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಮಹಿಳೆ ಒಂದು ಹತ್ಯೆ ಮಾಡಲು ವಿನಾಯಿತಿ ಇರಬೇಕು ಎಂದು ರಾಷ್ಟ್ರಪತಿಗೆ ಎನ್.ಸಿ.ಪಿ. (ಎಸ್.ಪಿ.) ಮಹಿಳಾ ವಿಭಾಗ ಪತ್ರ ಬರೆದಿದೆ.

ಮಹಿಳಾ ಘಟಕದ ಅಧ್ಯಕ್ಷೆ ರೋಹಿಣಿ ಖಡ್ಸೆ ಅವರು ಅಂತರರಾಷ್ಟ್ರೀಯ ಮಹಿಳಾ ದಿನದಂದು ಈ ಪತ್ರ ಬರೆದಿದ್ದು, ಕಾನೂನು ಹಾಗೂ ಸುವ್ಯವಸ್ಥೆ ಪರಿಸ್ಥಿತಿ ನಿಷ್ಕ್ರಿಯವಾಗಿದೆ. ಈ ಸಂದರ್ಭದಲ್ಲಿ ದಮನಕಾರಿ ಹಾಗೂ ಅತ್ಯಾಚಾರಿ ಮನೋಭಾವ ಕೊನೆಗಾಣಿಸಲು ಮಹಿಳೆಯರು ಬಯಸಿದ್ದಾರೆ ಎಂದಿದ್ದಾರೆ.

ಒಂದು ಹತ್ಯೆಯ ಶಿಕ್ಷೆಯಿಂದ ಮಹಿಳೆಗೆ ವಿನಾಯಿತಿ ನೀಡಬೇಕು ಎಂದು ಖಡ್ಸೆ (2ನೇ ಪುಟಕ್ಕೆ)


# ಪ್ರಧಾನಿ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಮಹಿಳಾ ದರ್ಬಾರ್

ನವದೆಹಲಿ, ಮಾ. 8 - ಅಂತರರಾಷ್ಟ್ರೀಯ ಮಹಿಳಾ ದಿನದಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಸಾಧಕಿ ಮಹಿಳೆಯರು ತಮ್ಮ ಅನುಭವ ಹಂಚಿಕೊಂಡಿದ್ದಾರೆ

ಚೆಸ್‌ನಿಂದ ಹಿಡಿದು ವಿಜ್ಞಾನ ಗ್ರಾಮೀಣಾಭಿವೃದ್ಧಿ ಹಾಗೂ ಹಣಕಾಸು ಸಬಲೀಕರಣದಿಂದ ಹಿಡಿದು ಒಳಗೊಳ್ಳುವಿಕೆಯ ಬೆಳವಣಿಗೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಚೆಸ್ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ, ರೈತ ಉದ್ಯಮಿ ಅನಿತಾ ದೇವಿ ಅಣು ವಿಜ್ಞಾನಿ ಎಲಿನಾ ಮಿಶ್ರ, ಬಾಹ್ಯಾಕಾಶ ವಿಜ್ಞಾನಿ ಶಿಲ್ಪಿ ಸೋನಿ, ಒಳಗೊಳ್ಳುವಿಕೆಯ ಪ್ರತಿಪಾದಕಿ ಅಂಜಲಿ ಅಗರ್ವಾಲ್ ಹಾಗೂ ಗ್ರಾಮೀಣ ಉದ್ಯಮದ ಅಜೈತಾ ಷಾ ಅವರು ಪ್ರಧಾನಮಂತ್ರಿ (2ನೇ ಪುಟಕ್ಕೆ)


ಇಂದು ಶ್ಯಾಬನೂರು ಆಂಜನೇಯ ಸ್ವಾಮಿ ರಥೋತ್ಸವ



ರಥೋತ್ಸವ : ದಿನಾಂಕ 9.03.2025ರ ಭಾನುವಾರ ರಾತ್ರಿ 12 ರಿಂದ
ಬೆಲ್ಲದ ಬಂಡಿ : ದಿನಾಂಕ 10.3.2025
ಓಕಳಿ ಉತ್ಸವ : ದಿನಾಂಕ 11.3.2025
ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...
ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಶ್ಯಾಬನೂರು.

ಚೆಫ್ Partners ಬೇಕಾಗಿದ್ದಾರೆ. 70/30% (ಲಾಭ ಪಾಲುದಾರಿಕೆಯಲ್ಲಿ)
1) ಪಾನಿಪುರಿ & ಸಂಬಂಧಿತ
2) ಫಾಲೌಡಾ (ice cream base)
3) Chinees
4)Sandwitches. ಪಿಜ್ಜಾ. Vada ಪಾವ್ etc
AKSHATHA FOOD & BEVERAGES
ಮೊ : 98866 18484

ಹೃದಯಪೂರ್ವಕ ಅಭಿನಂದನೆಗಳು






'ಏಷ್ಯಾನೆಟ್ ಸುವರ್ಣ ನ್ಯೂಸ್' ಮತ್ತು 'ಕನ್ನಡಪ್ರಭ' ಸಹಯೋಗದಲ್ಲಿ ನೀಡುವ
'2025ರ ಸುವರ್ಣ ಕನ್ನಡಿಗ' ಪ್ರಶಸ್ತಿಯನ್ನು
ಉದ್ಯಮ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಾದ
ಗ್ಲೋಬಲ್ ಟ್ರೇಡರ್ಸ್ ಮತ್ತು ಗ್ಲೋಬಲ್ ಗೋಲ್ಡ್ ಫಿಂಚ್ ಮಾಲೀಕರಾದ
ಶ್ರೀ ಸುನಿಲ್‌ಕುಮಾರ್ ಬಿ.ಜೆ.
ಅವರಿಗೆ ಮೈಸೂರು ಮಹಾರಾಜರೂ, ಸಂಸದರೂ ಆದ
ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನೀಡಿ, ಸನ್ಮಾನಿಸಿದ್ದಾರೆ.
ಶ್ರೀ ಸುನಿಲ್‌ಕುಮಾರ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಶುಭ ಕೋರುವವರು :
ಸಿಬ್ಬಂದಿ ವರ್ಗ
✦ ಗ್ಲೋಬಲ್ ಟ್ರೇಡರ್ಸ್
✦ ಗ್ಲೋಬಲ್ ಗೋಲ್ಡ್ ಫಿಂಚ್
✦ ಜಾಜೂರ್ ಅಂಡ್ ಕೋ

ತಪ್ಪದೇ ವೀಕ್ಷಿಸಿ
ಇಂದು ಭಾನುವಾರ ಮಧ್ಯಾಹ್ನ 3:00ಕ್ಕೆ
ವೀಕ್ಷಿಸಿ ನಿಮ್ಮ ಏಷ್ಯಾನೆಟ್ ಸುವರ್ಣ ನ್ಯೂಸ್‌ನಲ್ಲಿ

# ರಾಜ್ಯ ಬಜೆಟ್‌ನಲ್ಲಿ ಜಿಲ್ಲಾ ಜನತೆಗೆ ಅನ್ಯಾಯ

## ಬಿಜೆಪಿ ಜಿಲ್ಲಾ ಘಟಕದಿಂದ ಟ್ರ್ಯಾಕ್ಟರ್ ಜಾಥಾ, ಪ್ರತಿಭಟನೆ, ಕಾಂಗ್ರೆಸ್ ವಿರುದ್ಧ ಆಕ್ರೋಶ



ದಾವಣಗೆರೆ, ಮಾ.8- ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ರಾಜ್ಯ ಬಜೆಟ್‌ಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಬಿಜೆಪಿ ಜಿಲ್ಲಾ ಘಟಕವು ಶನಿವಾರ ನಗರದಲ್ಲಿ ಪ್ರತಿಭಟನೆ ನಡೆಸಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ ಬಿಜೆಪಿ ಮುಖಂಡರು, ಕಾರ್ಯಕರ್ತರು ಗಾಂಧಿ ವೃತ್ತದ ಮೂಲಕ ಉಪ ವಿಭಾಗಾಧಿಕಾರಿ ಕಚೇರಿ ವರೆಗೆ ಟ್ರ್ಯಾಕ್ಟರ್ ಜಾಥಾ ನಡೆಸಿ, ಪಿ.ಬಿ. ರಸ್ತೆಯಲ್ಲಿ ರಸ್ತೆ ತಡೆ ನಡೆಸಿ, ಬಜೆಟ್ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುವುದು, ಭದ್ರಾ ಕಾಲುವೆ ಆಧುನೀಕರಣಕ್ಕೆ ಅನುದಾನ ಮೀಸಲಿಡುವುದು, ಭದ್ರಾ ಡ್ಯಾಂ ಸುರಕ್ಷತೆಗೆ ಅನುದಾನ ನೀಡುವುದು, ಜಿಲ್ಲೆಯಲ್ಲಿ ತೋಟಗಾರಿಕೆ ಕಾಲೇಜು, ಮೆಕ್ಕೆಜೋಳ ಸಂಸ್ಕರಣಾ ಘಟಕ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸೇರಿದಂತೆ, ಹಲವು ಬೇಡಿಕೆಗಳು ನೆನೆಗುದಿಗೆ ಬಿದ್ದಿವೆ. ಇದರಿಂದ ಜಿಲ್ಲಾ ಜನತೆಗೆ ನಿರಾಸೆಯಾಗಿದೆ. ಜಿಲ್ಲಾ ಮಟ್ಟದ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿ, ಅನುದಾನ ತರಲು ಜಿಲ್ಲಾ ಉಸ್ತುವಾರಿ ಸಚಿವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಆರೋಪಿಸಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್ ಮಾತನಾಡಿ, 1.16 ಲಕ್ಷ ಕೋಟಿ ಸಾಲ ಮಾಡಲು ಮುಂದಾಗಿರುವ ಸಿದ್ಧರಾಮಯ್ಯ, ರಾಜ್ಯವನ್ನು ಅಧೋಗತಿಗೆ ಕೊಂಡೊಯ್ಯುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯದ ರೈತರು, ದಲಿತರು, ಹಿಂದುಳಿದವರು ಮುಖ್ಯಮಂತ್ರಿಗಳ ಕಾಣ್ಣಿಗೆ ಕಾಣುತ್ತಿಲ್ಲವೇ? ದಾವಣಗೆರೆ ಜಿಲ್ಲಾ ಜನತೆ ಕಾಂಗ್ರೆಸ್‌ಗೆ ಮತ ಹಾಕಿಲ್ಲವೇ? ಇಲ್ಲಿನ ಜನತೆಗೆ ಸರ್ಕಾರ ಏನು ಕೊಡುಗೆ ಕೊಟ್ಟಿದೆ? ಜಿಲ್ಲಾ ಜನತೆಗೆ ಆದ ಅನ್ಯಾವನ್ನು ಸಹಿಸುವುದಿಲ್ಲ ಎಂದರು.

ರೈತ ಮುಖಂಡ, ಬಿಜೆಪಿ ಜಿಲ್ಲಾ ವಕ್ತಾರ ಕೊಳೇನಹಳ್ಳಿ ಸತೀಶ್ ಮಾತನಾಡಿ, ಬಜೆಟ್‌ನಲ್ಲಿ ಜಿಲ್ಲೆಯ ಜನತೆಯ ಬೇಡಿಕೆಗಳಿಗೆ ಕವಡೆ ಕಾಸಿನ ಕಿಮ್ಮತ್ತು ನೀಡಿಲ್ಲ. ವಿಮಾನ ನಿಲ್ದಾಣದ ಬಹುದಿನಗಳ ಬೇಡಿಕೆ ಈಡೇರಲಿಲ್ಲ. ಜಿಲ್ಲಾಸ್ಪತ್ರೆಯನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡುವ ಬೇಡಿಕೆ ಸೇರಿದಂತೆ ಹಲವು ಬೇಡಿಕೆಳಿಗೆ ಮಾನ್ಯತೆ ನೀಡದೇ ದಾವಣಗೆರೆ ಜಿಲ್ಲಾ ಜನತೆಗೆ ಬಹಳ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿದರು.

ರೈತ ಮುಖಂಡ ಆಲೂರು ಲಿಂಗರಾಜ್ ಮಾತನಾಡುತ್ತಾ, ದಲಿತರ ಪಾಲಿನ 25 ಸಾವಿರ ಕೋಟಿ ರೂ. ಬೇರೆ ಯೋಜನೆಗೆ ಬಳಸಿ ವಂಚಿಸಿದ್ದ ಸಿದ್ಧರಾಮಯ್ಯ, ಈಗ ಬಜೆಟ್‌ನಲ್ಲೂ ಅನ್ಯಾಯ ಮಾಡಿದ್ದಾರೆ ಎಂದು ದೂರಿದರು.

ಹರಿಹರದ ರೈತ ಮುಖಂಡ ಚಂದ್ರಶೇಖರ್ ಪೂಜಾರ್, ಬಜೆಟ್ 'ಸಾಲ ಮಾಡಿ ತುಪ್ಪ ತಿನ್ನುವಂತಿದೆ. ಈ ಹಿಂದೆ ಯಾರೂ ಮಾಡದಷ್ಟು ಹೆಚ್ಚು ಸಾಲವನ್ನು ಮಾಡಿದ ಕೀರ್ತಿ ಸಿದ್ಧರಾಮಯ್ಯನವರಿಗೆ ಸಲ್ಲುತ್ತದೆ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್ ಸರ್ಕಾರ ದಿವಾಳಿ ಸರ್ಕಾರ. ರಾಜ್ಯ ಅಭಿವೃದ್ಧಿಗೆ ಮಾರಕವಾಗಿದೆ. ಒಂದು ವರ್ಷದ ಜನರ ಓಲೈಕೆಗೆ ಮುಂದಾಗಿರುವ ಸರ್ಕಾರಕ್ಕೆ ಧಿಕ್ಕಾರ ಎಂದರು.

ಬಿಜೆಪಿ ಮುಖಂಡ ಶಿವನಳ್ಳಿ ರಮೇಶ್ ಮಾತನಾಡುತ್ತಾ, 4 ಲಕ್ಷ ಕೋಟಿ ರೂ. ಬಜೆಟ್‌ಗೆ 1.16 ಲಕ್ಷ ಕೋಟಿ ಸಾಲ ಮಾಡಲು ಸಿದ್ಧರಾಮಯ್ಯ ಹೊರಟಿದ್ದಾರೆ. ಅಷ್ಟೊಂದು ಸಾಲ ಮಾಡಿ ನಡೆಸುವ ಸರ್ಕಾರ ಬಹಳ ದಿನ ಇರುತ್ತದೆಯೇ? ರಾಜ್ಯದ 224 ಶಾಸಕರು ಈ ಬಗ್ಗೆ ಚಿಂತಿಸಬೇಕಿದೆ ಎಂದರು.

ಸಮಾಜವಾದಿ, ಹಿಂದುಳಿದ ವರ್ಗದ ಹಿನ್ನೆಲೆಯಲ್ಲಿ ಬಂದ ಸಿದ್ಧರಾಮಯ್ಯ, ಶೇ.10 ರಷ್ಟು ಜನರನ್ನು ಓಲೈಸಲು ಬಡ ಹಾಗೂ ಮಧ್ಯಮ ವರ್ಗದವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ ಮಧ್ಯಮ ವರ್ಗದವರೂ ವಿಷ ಕುಡಿಯುವ ಪರಿಸ್ಥಿತಿ ಬರುತ್ತದೆ ಎಂದು ಎಚ್ಚರಿಸಿದರು.

ಮಾಜಿ ಶಾಸಕ ಬಸವರಾಜ ನಾಯ್ಕ ಮಾತನಾಡುತ್ತಾ, ಅಲ್ಪಸಂಖ್ಯಾತರ ಓಲೈಕೆ ಹೆಚ್ಚಾಗಿದೆ. ಸರ್ಕಾರದ ಬೊಕ್ಕಸ ಖಾಲಿಯಾಗಿದ್ದು, ಸಾಲ ಮಾಡುತ್ತಿರುವುದು ಜನರಿಗೆ ಹೆಚ್ಚು ಹೊರೆಯಾಗಲಿದೆ. ಎಸ್ಸಿ, ಎಸ್ಟಿ ಜನಾಂಗಕ್ಕೆ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದರು.

ಮುಖಂಡರುಗಳಾದ ಶ್ರೀನಿವಾಸ ದಾಸಕರಿಯಪ್ಪ, ಬಿ.ಜಿ. ಅಜಯ್ ಕುಮಾರ್, ಆರ್.ಎಲ್. ಶಿವಪ್ರಕಾಶ್, ಐರಣಿ ಅಣ್ಣೇಶ್, ಬಾತಿ ಚಂದ್ರಶೇಖರ್, ಬಾತಿ ಶಿವಕುಮಾರ್, ಕೆ.ಪ್ರಸನ್ನಕುಮಾರ್, ಕೆ.ಎಂ. ವೀರೇಶ್, ಪಿ. ಎಸ್. ಬಸವರಾಜಪ್ಪ ನಿಟುವಳ್ಳಿ, ಶಿವಾನಂದ್, ಸುರೇಶ್ ಗಂಡುಗಲಿ, ವಿಶ್ವಾಸ್ ಹೆಚ್.ಪಿ, ಕೊಟ್ರೇಶ್ ಗೌಡ್ರು, ತಾರೇಶ್ ನಾಯಕ್, ಶಿವರಾಜ್ ಪಾಟೀಲ್, ಸಂತೋಷ್ ಪೈಲ್ವಾನ್, ಮಂಜು ಪೈಲ್ವಾನ್, ಚಿಕ್ಕಿ ಮಂಜು, ಅತ್ತಿಥ್, ರವಿ ನಾಯಕ, ಕಿರೀಟ್ ಕಲಾಲ್, ಹರೀಶ್, ರವಿ, ಪಂಜು, ಕೆ ವಿ ಗುರು, ಪ್ರವೀಣ, ನವೀನ್, ಗುರುರಾಜ್, ಬೆಳ್ಳೂಡಿ ಮಂಜುನಾಥ ಹಾಗೂ ಪಕ್ಷದ ಮುಖಂಡರುಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಇಸ್ರೇಲ್ ಮಹಿಳೆ ಸೇರಿದಂತೆ ಇಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ

**ಮಹಿಳೆಯರ ಜೊತೆಗಿದ್ದ ಮೂವರ ಮೇಲೆ ಹಲ್ಲೆ, ಓರ್ವನ ಸಾವು**

ಕೊಪ್ಪಳ, ಮಾ. 8 - ಹಂಪಿ ಬಳಿ 27 ವರ್ಷದ ಇಸ್ರೇಲ್ ಪ್ರವಾಸಿ ಮಹಿಳೆ ಸೇರಿದಂತೆ ಇಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯರ ಜೊತೆ ಇದ್ದ ಮೂವರು ಪುರುಷ ಪ್ರವಾಸಿಗರ ಮೇಲೆ ಹಲ್ಲೆ ನಡೆಸಲಾಗಿದೆ. ಒಬ್ಬರನ್ನು ಕಾಲುವೆಗೆ ತಳ್ಳಿ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಪುರುಷ ಪ್ರವಾಸಿಗರ ಪೈಕಿ ಒಬ್ಬರು ಅಮೇರಿಕಾ ಹಾಗೂ ಇನ್ನಿಬ್ಬರು ಒಡಿಶಾ ಹಾಗೂ ಮಹಾರಾಷ್ಟ್ರದವರು.

ಘಟನೆಗೆ ಸಂಬಂಧಿಸಿದಂತೆ ಗಂಗಾವತಿಯ ಸಾಯಿನಗರದ ಮಲ್ಲೇಶ್ ಹಾಗೂ ಚೇತನ್ ಸಾಯಿ ಎಂಬುವವರನ್ನು ಬಂಧಿಸಲಾಗಿದೆ. ಇನ್ನೋರ್ವನ ಶೋಧ ನಡೆದಿದೆ ಎಂದು ಕೊಪ್ಪಳದ ಎಸ್‌ಪಿ ರಾಮ್ ಎಲ್. ಅರಸಿದ್ದಿ ತಿಳಿಸಿದ್ದಾರೆ.

ಗುರುವಾರ ರಾತ್ರಿ 11 ಗಂಟೆಗೆ ಈ ಘಟನೆ ನಡೆದಿದೆ. 29 ವರ್ಷದ ಹೋಂ ಸ್ಟೇ ನಿರ್ವಾಹಕಿ ಹಾಗೂ ಇಸ್ರೇಲ್ ಪ್ರವಾಸಿ ಮಹಿಳೆ ಹಾಗೂ ಮೂವರು ಪುರುಷ ಪ್ರಯಾಣಿಕರು ಸಣಾಪುರ ಕೆರೆ ಬಳಿಯ ತುಂಗಭದ್ರಾ ಕಾಲುವೆ ಪಕ್ಕದಲ್ಲಿ ಸಂಗೀತ ಆಸ್ವಾದಿಸುತ್ತಾ ಕುಳಿತಿದ್ದರು.

ಆ ಸಂದರ್ಭದಲ್ಲಿ ಮೋಟರ್ ಸೈಕಲ್‌ನಲ್ಲಿ ಬಂದ ಮೂವರು ಪೆಟ್ರೋಲ್ ಎಲ್ಲಿ ಸಿಗುತ್ತದೆ ಎಂದು ಕೇಳಿದರು. ಹತ್ತಿರದಲ್ಲಿ ಎಲ್ಲೂ ಪೆಟ್ರೋಲ್ ಪಂಪ್ ಇಲ್ಲ, ಸಣಾಪುರಕ್ಕೆ ತೆರಳಬೇಕು ಎಂದು ಹೋಂ ಸ್ಟೇ ಮಹಿಳೆ ತಿಳಿಸಿದರು.

ಆಗ ನೂರು ರೂಪಾಯಿ ಕೊಡುವಂತೆ ಆರೋಪಿಗಳು ಕೇಳಿದರು. ಪರಿಚಯವಿಲ್ಲದ ಕಾರಣ ಹಣ ಕೊಡುವುದಿಲ್ಲ ಎಂದು ಮಹಿಳೆ ಹೇಳಿದರು. ಪದೇ ಪದೇ ಹಣಕ್ಕೆ ಒತ್ತಾಯಿಸಿದಾಗ ಒಡಿಶಾದ ಪ್ರವಾಸಿಗ 20 ರೂಪಾಯಿ ಕೊಟ್ಟರು. ನಂತರ ಮೂವರು ಆರೋಪಿಗಳು ವಾಗ್ವಾದ ನಡೆಸಿದರು ಹಾಗೂ ಬಂಡೆಗಳಿಂದ ತಲೆ ಒಡೆದು ಹಾಕುವುದಾಗಿ ಬೆದರಿಕೆ ಹಾಕಿದರು ಎಂದು ದೂರಿನಲ್ಲಿ ತಿಳಿಸಲಾಗಿದೆ. ಹಣ ಕೊಡಲು ಪ್ರವಾಸಿಗರು ನಿರಾಕರಿಸಿದಾಗ ಅವರ ಮೇಲೆ ಹಲ್ಲೆ ನಡೆಸಲಾಗಿದೆ. ಮೂವರು ಪುರುಷ ಪ್ರವಾಸಿಗರನ್ನು ಕಾಲುವೆಗೆ ದೂಡಿ ಹೋಂ ಸ್ಟೇ ಆಪರೇಟರ್ ಹಾಗೂ ಇಸ್ರೇಲಿ ಪ್ರವಾಸಿಗ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮೂವರು ಆರೋಪಿಗಳು ಹೋಂ ಸ್ಟೇ ಆಪರೇಟರ್ ಮೇಲೆ ಹಲ್ಲೆ ನಡೆಸಿದ ಕಾರಣ ಅವರಿಗೆ ಗಂಭೀರ ಗಾಯಗಳಾಗಿವೆ. ಅವರ ಬಳಿ ಇದ್ದ ಎರಡು ಮೊಬೈಲ್ ಹಾಗೂ ರೂ.9,500 ನಗದನ್ನು ಕಸಿದುಕೊಳ್ಳಲಾಗಿದೆ. ಹಲ್ಲೇ ನಂತರ ಆರೋಪಿಗಳು ಮೋಟರ್ ಸೈಕಲ್‌ನಲ್ಲಿ ಪರಾರಿಯಾಗಿದ್ದಾರೆ.

ಕಾಲುವೆಗೆ ಎಸೆಯಲ್ಪಟ್ಟಿದ್ದ ಮೂವರು ಪುರುಷ ಪ್ರವಾಸಿಗರ ಪೈಕಿ ಇಬ್ಬರು ಈಜಿಕೊಂಡು ದಡ ಸೇರಿದ್ದಾರೆ. ಇನ್ನೊಬ್ಬರು ಕಾಲುವೆಯಲ್ಲಿ ಸಿಲುಕಿ ಸಾವನ್ನಪ್ಪಿದ್ದಾರೆ.

ಈ ಬಗ್ಗೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇಬ್ಬರು ಮಹಿಳೆಯರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

# ಜಾರಿಯಲ್ಲಿದ್ದ 10,186 ಪ್ರಕರಣಗಳು ಇತ್ಯರ್ಥ

**(1ನೇ ಪುಟದಿಂದ)** ಪ್ರಕರಣಗಳಾದ ಬ್ಯಾಂಕ್ ಸಾಲ ವಸೂಲಾತಿ, ಕಾರ್ಮಿಕ ವ್ಯಾಜ್ಯಗಳು, ನೀರಿನ ಬಾಕಿ ವಸೂಲಾತಿ, ಕಂದಾಯ ಪ್ರಕರಣಗಳು, ಟ್ರಾಫಿಕ್ ಪ್ರಕರಣಗಳು ಇತ್ಯಾದಿ ಸೇರಿದಂತೆ ಒಟ್ಟಾರೆಯಾಗಿ 1,87,029 ಪ್ರಕರಣಗಳು ಇತ್ಯರ್ಥಗೊಂಡು ಒಟ್ಟು ಎಲ್ಲ ಪ್ರಕರಣಗಳಿಂದಾಗಿ 18,79,55,146 ಹಣ ವಸೂಲಾತಿಯಾಗಿದೆ ಎಂದು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣನವರ ತಿಳಿಸಿದ್ದಾರೆ. ಜಿಲ್ಲೆಯಾದ್ಯಂತ ಸುಮಾರು 1064ಕ್ಕಿಂತ ಹೆಚ್ಚು ಶಾಲಾ ವಿದ್ಯಾರ್ಥಿಗಳ ಜನನ ಪ್ರಮಾಣ ಪತ್ರಗಳ ಕುರಿತು ಕಂದಾಯ ಇಲಾಖೆ ಮತ್ತು ಪಾಲಿಕೆಯ ಅಧಿಕಾರಿಗಳು ರಾಜೀ ಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಮತ್ತು ಸರ್ಕಾರದಿಂದ ಬರಬಹುದಾದ ವಿದ್ಯಾರ್ಥಿ ವೇತನ ಹಾಗೂ ಇತರೆ ಅನುಕೂಲತೆಗಳಿಗೆ ಅನುವು ಮಾಡಿಕೊಟ್ಟಂತಾಗಿದೆ. ರಾಜೀ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡ ಕಕ್ಷಿದಾರರಿಗೆ ಎಲ್ಲ ನ್ಯಾಯಾಧೀಶರು ಅಭಿನಂದಿಸಿದ್ದಾರೆ.

## ತಿಂಗಳ ಅಂಗಳ ಬಳಗದಿಂದ ಕವಿಗೋಷ್ಠಿ

ದಾವಣಗೆರೆ ತಿಂಗಳ ಅಂಗಳ - ಸಾಹಿತ್ಯ, ಸಾಂಸ್ಕೃತಿಕ ಬಳಗದ ವತಿಯಿಂದ ಇಂದು ಮಧ್ಯಾಹ್ನ 3.30ಕ್ಕೆ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದ ಎಸ್.ಎಂ. ಕಾಂಪ್ಲೆಕ್ಸ್‌ನಲ್ಲಿ (ಹಳೆ ನಗರ ವಾಣಿ ಕಚೇರಿ ಎದುರು) ಯುಗಾದಿ ಸಂಭ್ರಮ ಶೀರ್ಷಿಕೆಯಡಿ ಕವಿಗೋಷ್ಠಿ ಆಯೋಜಿಸಲಾಗಿದೆ.

V 1 ಕಾವ್ಯಧಾರೆ ಕಾರ್ಯಕ್ರಮದ ನಿರ್ದೇಶಕ ಎಂ.ಹೆಚ್. ಚಿದಾನಂದ್ ಆತಿಥ್ಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಬಳಗದ ಸದಸ್ಯರು ಹಾಗೂ ಆಹ್ವಾನಿತ ಕವಿ ಮಿತ್ರರು ಯುಗಾದಿ, ಪ್ರಕೃತಿ ಸೌಂದರ್ಯ, ಪರಿಸರ ಕಾಳಜಿ, ಸ್ನೇಹ-ಸಂಬಂಧ ಅಥವಾ ಮಾನವತೆ ಮೇಲೆ ಬೆಳಕು ಚೆಲ್ಲುವ ಕವನಗಳನ್ನು ವಾಚಿಸು ವರು ಎಂದು ಬಳಗದ ಸಂಚಾಲಕ ಗಂಗಾಧರ ಬಿ.ಎಲ್. ನಿಟ್ಟೂರ್ ತಿಳಿಸಿದ್ದಾರೆ.

## 'ವನಿತಾ ಸೇವಾ ಪ್ರಶಸ್ತಿ' ಪ್ರದಾನ

**(1ನೇ ಪುಟದಿಂದ)** ಮಾಡಿದರೆ ಸಾಧನೆ ಸುಲಭವಾಗುತ್ತದೆ. ಸಮಾಜದ ಏಳಿಗೆಗೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ದಯಾಮರಣ ಹೋರಾಟಗಾರ್ತಿ ಹೆಚ್.ಬಿ.ಕರಿಬಸಮ್ಮ ಅವರನ್ನು ಗೌರವಿಸಲಾಯಿತು. ವನಿತಾ ಸೇವಾ ಪ್ರಶಸ್ತಿಗೆ ಭಾಜನರಾದ ಕಿರುವಾಡಿ ಗಿರಿಜಮ್ಮ ಅವರನ್ನು ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸನ್ಮಾನಿಸಿದರು.

ಎಸ್.ಎಸ್. ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕಿ ಶಶಿಕಲಾ ಪಿ.ಕೃಷ್ಣಮೂರ್ತಿ, ರಾಜನಹಳ್ಳಿ ಸೀತಮ್ಮ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಅರುಣಕುಮಾರಿ ಬಿರಾದಾರ್ ಮಾತನಾಡಿದರು. ವನಿತಾ ಸಮಾಜದ ಅಧ್ಯಕ್ಷೆ ಪದ್ಮ ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸುಷ್ಮಾ ಮೋಹನ್, ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ ಸದಸ್ಯ ಸಿ.ಆರ್. ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು. ಕದಳಿ ಮಹಿಳಾ ವೇದಿಕೆಯ ರೇಖಾ ಓಂಕಾರಪ್ಪ, ಶೈಲಜಾ ತಿಮ್ಮೇಶ್ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಸತ್ಯಭಾಮ ಮಂಜುನಾಥ್ ನಿರೂಪಿಸಿದರು. ನಾಗರತ್ನ ಜಗದೀಶ್ ಸ್ವಾಗತಿಸಿದರು. ನಳಿನಿ ಅಚ್ಚುತ್, ವಾಗ್ದೇವಿ ವರದಿ ವಾಚಿಸಿ, ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿದರು.

## ನಗರದ ಎವಿಕೆ ಕಾಲೇಜಿನಲ್ಲಿ ಇಂದು

ಎ. ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಪದವಿ ಪ್ರದಾನ ಸಮಾರಂಭ ನಡೆಯಲಿದೆ. ಸಂಪನ್ನ ಮುತಾಲಿಕ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಪ್ರಾಂಶುಪಾಲರಾದ ಶ್ರೀಮತಿ ಕಮಲ ಸೊಪ್ಪಿನ್ ಅಧ್ಯಕ್ಷತೆ ವಹಿಸುವರು. ಪ್ರೊ. ಆರ್. ಶಶಿಧರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಆರ್.ಆರ್. ಶಿವಕುಮಾರ್ ಅವರು ಉಪಸ್ಥಿತರಿರುವರು.

# ಹರಿಹರದಲ್ಲಿ ಇಂದು ಅಹಿಂದ ಮುಖಂಡರ ಸಭೆ




**ಕಾಂತರಾಜ ಆಯೋಗದ ವರದಿ ಅನುಷ್ಠಾನ ವಿಳಂಬ**

ಹರಿಹರ, ಮಾ.8- ಕಾಂತರಾಜ ಆಯೋಗದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಅನುಷ್ಠಾನಕ್ಕೆ ತರುವಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡುತ್ತಿರುವ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲು ನಾಳೆ ದಿನಾಂಕ 9 ರ ಭಾನುವಾರ ಬೆಳಗ್ಗೆ 11 ಗಂಟೆಗೆ ಅಹಿಂದ ಹಾಗೂ ಶೋಷಿತ ಸಮುದಾಯದ ಮುಖಂಡರ ಸಭೆಯನ್ನು ಏರ್ಪಡಿಸಲಾಗಿದೆ ಎಂದು ನಿವೃತ್ತ ಎಸ್ಪಿ ಹಾಗೂ ಅಹಿಂದ ಹಾಗೂ ಶೋಷಿತ ಸಮುದಾಯಗಳ ವೇದಿಕೆ ಜಿಲ್ಲಾಧ್ಯಕ್ಷ ಎನ್. ರುದ್ರಮುನಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು. ನಮ್ಮ ಹೋರಾಟ ಯಾರ ವಿರುದ್ಧ ಅಥವಾ ಪರವಾಗಿ ಎನ್ನುವುದರ ಬದಲಿಗೆ ನ್ಯಾಯವನ್ನು ಪಡೆಯುವ ಉದ್ದೇಶದಿಂದ ಕೂಡಿದೆ ಎಂದು ಹೇಳಿದರು.

ಈಗಾಗಲೇ ಈ ವಿಚಾರಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿ ಸಭೆಯನ್ನು ಏರ್ಪಡಿಸಿ ಅಲ್ಲಿನ ಜನತೆಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗಿದೆ. ಹರಿಹರ ನಗರದ ಜೆ.ಸಿ. ಬಡಾವಣೆಯ ಬಾಬಾ ಸಾಹೇಬ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ಸಭೆ ಸೇರಿ ಮುಂದಿನ ಕಾರ್ಯ ಚಟುವಟಿಕೆಗಳ ಬಗ್ಗೆ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಅಹಿಂದ ಹಾಗೂ ಶೋಷಿತ ಸಮುದಾಯದ ತಾಲ್ಲೂಕು ಅಧ್ಯಕ್ಷ ಜಿ.ಹೆಚ್. ಮರಿಯೋಜಿ ರಾವ್ ಮಾತನಾಡಿ, 2013 ರಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು ಕಾಂತರಾಜ್ ಆಯೋಗವು ನಡೆಸಿದ ವರದಿಯ ಮಂಡನೆ ಕಾರ್ಯವನ್ನು ಮಾಡಲಿಲ್ಲ. ಆದರೆ ಅದೃಷ್ಟವಶಾತ್ ಅನುಷ್ಠಾನಕ್ಕೆ ತರಲು ಮುಂದಾದ ಸಮಯದಲ್ಲಿ ಕೆಲವು ಪಟ್ಟ ಭದ್ರ ಹಿತಾಸಕ್ತರು ಜಾರಿಗೆ ಮಾಡುವುದನ್ನು ತಡೆಯಲು ಮುಂದಾದರು ಎಂದು ಆರೋಪಿಸಿದರು.

ಗೋಷ್ಠಿಯಲ್ಲಿ ಕಾರ್ಮಿಕ ಮುಖಂಡ ಹೆಚ್. ಕೆ. ಕೊಟ್ರಪ್ಪ, ಅಹಿಂದ ವರ್ಗದ ಮುಖಂಡ ಕೆ. ಬಿ. ರಾಜಶೇಖರ್, ಅಂಜುಮಾನ್ ಇಸ್ಲಾಮಿಯಾ ಸಮಿತಿಯ ಮಾಜಿ ಅಧ್ಯಕ್ಷ ಮಹಮ್ಮದ್ ಫೈರೋಜ್, ಡಾ. ಜಗನ್ನಾಥ್, ಹಾಲೇಶಪ್ಪ, ಗೂರಪ್ಪ ಶಿವಳ್ಳಿ, ಪಿ. ನಾಗರಾಜ್ ಆಚಾರ, ಅಂಜಿನಪ್ಪ, ಹನುಮಂತಪ್ಪ, ಬಿ. ಮುಗ್ದಂ ಇತರರು ಇದ್ದರು.

## ಸಿರಿಯಾ ಸರ್ಕಾರಿ ಪಡೆ-ಅಸಾದ್ ಬೆಂಬಲಿಗರ ಸಂಘರ್ಷ 600 ಸಾವು

ಬ್ಯೂರತ್, ಮಾ. 8 - ಸಿರಿಯಾದ ನೂತನ ಸರ್ಕಾರದ ಪಡೆಗಳು ಹಾಗೂ ಪದಚ್ಯುತ ಅಧ್ಯಕ್ಷ ಬಶರ್ ಅಸಾದ್ ಅವರ ನಿಷ್ಠರ ನಡುವೆ ನಡೆದ ಘರ್ಷಣೆಯಲ್ಲಿ 600ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ.

ಇತ್ತೀಚಿಗೆ ಅಸಾದ್ ಬೆಂಬಲಿಗರು ನೂತನ ಸರ್ಕಾರದ ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಿದ್ದರು. ಇದಾದ ನಂತರ ಸರ್ಕಾರದ ಪಡೆಗಳು ಕರಾವಳಿ ಜಿಲ್ಲೆಯ ಹಳ್ಳಿಗಳ ಮೇಲೆ ದಾಳಿ ನಡೆಸಿವೆ.

ಗುರುವಾರ ಹಾಗೂ ಶುಕ್ರವಾರ ಹಳ್ಳಿಗಳಲ್ಲಿ ನಡೆದ ಘರ್ಷಣೆಯಲ್ಲಿ 600ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. ಕಳೆದ ಡಿಸೆಂಬರ್ ತಿಂಗಳಲ್ಲಿ ಅಸಾದ್ ಸರ್ಕಾರ ಪತನಗೊಂಡ ನಂತರ ನಡೆದ ಅತ್ಯಂತ ತೀವ್ರ ಹಿಂಸಾಚಾರ ಇದಾಗಿದೆ.

ಅಸಾದ್ ಸರ್ಕಾರದ ಪತನದ ನಂತರ ಇಸ್ಲಾಮಿಕ್ ಸಂಘಟನೆಯಾದ ಹೈಯಾತ್ ತಹರೀರ್ ಅಲ್ ಶಾಮ್ ಸಂಘಟನೆಯು ಅಧಿಕಾರಕ್ಕೆ ಬಂದಿತ್ತು. 14 ವರ್ಷಗಳಿಂದ ಸಿರಿಯಾದಲ್ಲಿ ನಡೆಯುತ್ತಿರುವ ಆಂತರಿಕ ಯುದ್ಧವನ್ನು ನಿವಾರಿಸುವುದಾಗಿ ನೂತನ ಸರ್ಕಾರ ಹೇಳಿತ್ತು.

ಮಾರ್ಚ್ 2011 ರಿಂದ ಸಿರಿಯಾ ಅಂತರ್ಯುದ್ಧ ಎದುರಿಸುತ್ತಿದೆ. ಇದರಿಂದಾಗಿ ದೇಶದ 5 ಲಕ್ಷಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಹಾಗೂ ಲಕ್ಷಾಂತರ ಜನ ಸ್ಥಳಾಂತರಗೊಂಡಿದ್ದಾರೆ.

## ರಾಣೇಬೆನ್ನೂರು ಪಿಎಲ್‌ಡಿ ಬ್ಯಾಂಕಿಗೆ ಅಧ್ಯಕ್ಷ - ಉಪಾಧ್ಯಕ್ಷರ ಆಯ್ಕೆ




ರಾಣೇಬೆನ್ನೂರು, ಮಾ. 8 - ಇಂದು ನಡೆದ ಪಿಎಲ್‌ಡಿ ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಕರೇಗೌಡ ಬಾಗೂರ, ಉಪಾಧ್ಯಕ್ಷರಾಗಿ ಹಾಲಪ್ಪ ಲಮಾಣಿ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಶಾಸಕ ಪ್ರಕಾಶ ಕೋಳಿವಾಡ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಚಂಡಿಕಾ ಯಾಗ

ಹದಡಿ ರಸ್ತೆಯಲ್ಲಿರುವ ಶ್ರೀ ಕ್ಷೇತ್ರ ನವಸ್ಥಾನ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನ, ಶ್ರೀ ಕೊಪ್ಪದಾಂಬ ಸೇವಾ ಟ್ರಸ್ಟ್‌ನಿಂದ 30ನೇ ವರ್ಷದ ವಾರ್ಷಿಕೋತ್ಸವ ಶ್ರೀ ಶನೇಶ್ವರ ಸ್ವಾಮಿ ಮಹಾಯಾಗ ಹಾಗೂ ಶ್ರೀ ಮಹಾಚಂಡಿಕಾ ಯಾಗವು ಇಂದು ಬೆಳಿಗ್ಗೆ 7 ರಿಂದ ಪ್ರಾರಂಭೋತ್ಸವ ಮಧ್ಯಾಹ್ನ 1ಕ್ಕೆ ಪೂರ್ಣಾಹುತಿ ನಂತರ ಅನ್ನ ಸಂತರ್ಪಣೆ ಇರುತ್ತದೆ. ಮಹಾ ಚಂಡಿಕಾ ಯಾಗ ಹಾಗೂ ಜಿಯಾದಿ ಹೋಮ ಪೂರ್ಣಾಹುತಿ ನೆರವೇರಲಿದೆ.

## ಖಾತೆಗಳಲ್ಲಿ ಮಹಿಳಾ ದರ್ಬಾರ್

**(1ನೇ ಪುಟದಿಂದ)** ಸಾಮಾಜಿಕ ಜಾಲ ಖಾತೆಗಳನ್ನು ನಿರ್ವಹಿಸಿದ್ದರು. 6ನೇ ವರ್ಷವಾಗಿರುವಾಗಿನಿಂದ ಚೆಸ್ ಆಟದಲ್ಲಿ ತೊಡಗಿರುವ ವೈಶಾಲಿ ಅವರು, ಬಾಲಕಿಯರು ತಮ್ಮ ಕನಸುಗಳನ್ನು ಸಾಕಾರಗೊಳಿಸಲು ಮುಂದಾಗಬೇಕು ಎಂದು ಉತ್ತೇಜನ ನೀಡಿದರು. ಏನೇ ಅಡ್ಡಿಗಳು ಬಂದರು ಮಹಿಳೆಯರು ಅದರಲ್ಲೂ ಯುವತಿಯರು ನಿಮ್ಮ ಕನಸುಗಳನ್ನು ಸಾಕಾರಗೊಳಿಸಲು ಶ್ರಮಿಸಬೇಕು. ನಿಮ್ಮ ಈ ಚೈತನ್ಯ ಯಶಸ್ಸಿಗೆ ಶಕ್ತಿ ತುಂಬುತ್ತದೆ ಎಂದು ವೈಶಾಲಿ ಹೇಳಿದರು.

ಬಿಹಾರದ ರೈತ ಉದ್ಯಮಿ ಅನಿತಾ ದೇವಿ ಮಾತನಾಡಿ, ತಮ್ಮ ಮಾಧವಪುರ್ ರೈತ ಉತ್ಪಾದಕರ ಕಂಪನಿಯಿಂದಾಗಿ ನೂರಾರು ಮಹಿಳೆಯರು ಜೀವನೋಪಾಯ ಕಂಡುಕೊಂಡಿದ್ದಾರೆ ಎಂದು ಹೇಳಿದರು. ತಮ್ಮ ಉದ್ಯಮದಲ್ಲಿನ ಮಹಿಳೆಯರು ಜೀವನೋಪಾಯ ಕಂಡುಕೊಂಡಿರುವುದಷ್ಟೇ ಅಲ್ಲದೆ ವಿಶ್ವಾಸ ಹಾಗೂ ಆತ್ಮಗೌರವವನ್ನು ಗಳಿಸಿದ್ದಾರೆ. ಆರ್ಥಿಕ ಸ್ವಾತಂತ್ರ್ಯದಿಂದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಹೆಚ್ಚಾಗುತ್ತದೆ ಎಂದು ತಿಳಿಸಿದರು. ವಿಜ್ಞಾನ ವಲಯದಲ್ಲಿ ಮಹಿಳೆಯರು ಸಾಧನೆ ಮಾಡಲು ಇರುವ ಅವಕಾಶಗಳ ಕುರಿತು ವಿಜ್ಞಾನಿಗಳಾದ ಎಲಿನಾ ಮಿಶ್ರ ಹಾಗೂ ಶಿಲ್ಪಿ ಸೋನಿ ತಿಳಿಸಿದರು.

ಮಹಿಳಾ ಸಾಧಕಿಯರ ಸಂದೇಶದ ನಂತರ ಹೇಳಿಕೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ವಿವಿಧ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಆದರೆ ಅವರೆಲ್ಲರೂ ನಾರಿ ಶಕ್ತಿಯ ಪ್ರತಿಕವಾಗಿದ್ದಾರೆ. ಅವರ ಬದ್ಧತೆ ಹಾಗೂ ಯಶಸ್ಸುಗಳು ಮಹಿಳೆಯರಿಗೆ ಇರುವ ಅಪಾರ ಸಾಮರ್ಥ್ಯ ತೋರಿಸುತ್ತವೆ ಎಂದಿದ್ದಾರೆ.

## ಒಪ್ಪಂದದ ಬಗ್ಗೆ ಮಾತು ಈಗ ಅವಸರ

**(1ನೇ ಪುಟದಿಂದ)** ಭಾರತ ನಿರ್ಧರಿಸಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದರು. ಕಳೆದ ತಿಂಗಳು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಮೆರಿಕಗೆ ಭೇಟಿ ನೀಡಿದ ಸಂದರ್ಭದಲ್ಲಿ ಟ್ರಂಪ್ ಜೊತೆ ವ್ಯಾಪಾರಿ ಒಪ್ಪಂದದ ಕುರಿತು ಚರ್ಚೆ ನಡೆಸಿದ್ದರು.

ಈ ಕುರಿತ ಪ್ರಶ್ನೆಗೆ ಉತ್ತರಿಸಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ವ್ಯಾಪಾರಿ ಒಪ್ಪಂದದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಈ ಹಂತದಲ್ಲಿ ವಿವರಗಳನ್ನು ಬಹಿರಂಗ ಪಡಿಸುವುದು ಸೂಕ್ತವಲ್ಲ ಎಂದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಭಾರತ ಕೈಗೊಂಡ ಹಲವು ದ್ವಿಪಕ್ಷೀಯ ವ್ಯಾಪಾರಿ ಒಪ್ಪಂದಗಳಲ್ಲಿ ತೆರಿಗೆಗಳ ಉದಾರೀಕರಣಗೊಳಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

## ಸಿದ್ದರಾಮಯ್ಯ, ಡಿಕೆಶಿ ಒಂದಾಗಲಿ

**(1ನೇ ಪುಟದಿಂದ)** ನರೇಂದ್ರ ಮೋದಿ ವಿರುದ್ಧ ಇದೇ ಸಂದರ್ಭದಲ್ಲಿ ವಾಗ್ದಾಳಿ ನಡೆಸಿದ ಖರ್ಗೆ, ಹನ್ನೊಂದು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಹನ್ನೊಂದು ದೊಡ್ಡ ಸುಳ್ಳುಗಳನ್ನು ಹೇಳಿದ್ದಾರೆಂದು ಟೀಕಿಸಿದರು.

ವಿದೇಶದಲ್ಲಿ ಹಣ ಇಟ್ಟಿದ್ದನ್ನು ದೇಶಕ್ಕೆ ತಂದು 15 ಲಕ್ಷ ರೂ ಹಾಕುತ್ತೇನೆ ಎಂದಿದ್ದರು. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆ ಎಂದು ಹೇಳಿದ್ದರು. ತೈಲ ಇಳಿಕೆ ಮಾಡುತ್ತೇನೆಂದು ಹೇಳಿದ್ದರು. 2022ರಲ್ಲೇ ಗಂಗಾ ನದಿ ಪೂರ್ಣ ಸ್ವಚ್ಛಗೊಳಿಸುವುದಾಗಿ, ಮೇಕ್ ಇನ್ ಇಂಡಿಯಾ ಮೂಲಕ 10 ಕೋಟಿ ಜನರಿಗೆ ಉದ್ಯೋಗ, 2022ರಲ್ಲೇ ಎಲ್ಲ ಭಾರತೀಯರಿಗೆ ಪಕ್ಕಾ ಮನೆ ಕಲ್ಪಿಸಲಾಗುವುದು ಎಂದು ಹೇಳಿದ್ದರು. ಆದರೆ, ಈ ಯಾವ ಭರವಸೆಗಳನ್ನೂ ಈಡೇರಿಸಿಲ್ಲ ಎಂದು ಖರ್ಗೆ ಹೇಳಿದರು.

## ಒಂದು ಹತ್ಯೆ ಮಾಡಲು ಮಹಿಳೆಗೆ ಹಕ್ಕು ಕೊಡಿ

**(1ನೇ ಪುಟದಿಂದ)** ಒತ್ತಾಯಿಸಿದ್ದಾರೆ. ಅಪಹರಣ ಹಾಗೂ ಗೃಹ ಹಿಂಸಾಚಾರ ಸೇರಿದಂತೆ ಮಹಿಳೆಯರ ವಿರುದ್ಧ ಹಲವು ದೌರ್ಜನ್ಯಗಳು ನಡೆಯುತ್ತಿವೆ. ಭಾರತ ಅಸುರಕ್ಷಿತ ದೇಶ ಎಂದು ಸಮೀಕ್ಷೆಯೊಂದು ತಿಳಿಸಿದೆ ಎಂದು ಖಡ್ಸೆ ಹೇಳಿದ್ದಾರೆ.


**ಹರೀಶ್ ಕೆ.ಎಲ್. ಬಸಾಪುರ ಇವರ ಮಾವನವರಾದ ಹಳೆಬಾತಿ ಹನುಮಂತಪ್ಪ ನಿಧನ**



ದಾವಣಗೆರೆ ಸಂಸದರ ಆಪ್ತ ಸಹಾಯಕ ಹರೀಶ್ ಕೆ.ಎಲ್. ಬಸಾಪುರ ಇವರ ಮಾವನವರಾದ ಹಳೇಬಾತಿ ಗ್ರಾಮದ

**ಎಚ್.ಎಸ್. ಹನುಮಂತಪ್ಪನವರು** (58 ವರ್ಷ)

ಇವರು ದಿನಾಂಕ 08.03.2025ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, ಪುತ್ರಿ, ಅಳಿಯ, ಮೊಮ್ಮಗ, ತಾಯಿ, ಸಹೋದರ ಹಾಗೂ ಸಹೋದರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 09.03.2025ನೇ ಭಾನುವಾರ ಬೆಳಗ್ಗೆ 11 ಗಂಟೆಗೆ ಮೃತರ ಜಮೀನಿನಲ್ಲಿ ನೆರವೇರಲಿದೆ.

ಮೃತರ ಪತ್ನಿ : ಸುಜಾತ, ಮಗಳು - ಹರ್ಷಿತಾ
ಅಳಿಯ : ಹರೀಶ್ ಕೆ.ಎಲ್. ಬಸಾಪುರ
ಮೊಮ್ಮಗ : ಅಥರ್ವ ಕೆ.ಎಚ್.
ಶ್ರೀಮತಿ ನಿಂಗಮ್ಮ ಶ್ರೀ ದಿ. ಎಚ್.ಎಸ್ ಲಕ್ಷ್ಮಪ್ಪ ಮತ್ತು ಮಕ್ಕಳು, ಅಳಿಯಂದಿರು, ಹಳೆಬಾತಿ.
ಶ್ರೀಮತಿ ಲತಾ ಶ್ರೀ ಕೆಂಪನಹಳ್ಳಿ ಲಿಂಗೇಶ್ವರಪ್ಪ ಮತ್ತು ಮಕ್ಕಳು ಅಳಿಯಂದಿರು, ಬಸಾಪುರ.
ಶ್ರೀಮತಿ ಶ್ರೀ ಎಚ್.ಬಿ ಶಿವಮೂರ್ತಿ, ಶ್ರೀಮತಿ ಶ್ರೀ ಎಚ್.ಬಿ ಸುರೇಶ್ ಹಾಲವರ್ತಿ, ಸಣ್ಣ ಹನುಮಪ್ಪಳ ವಂಶಸ್ಥರು, ಹಳೆಬಾತಿ.

**ಎರಡನೇ ವರ್ಷದ ಪುಣ್ಯಸ್ಮರಣೆ**



**ದಿ|| ಸೊಲ್ಲಾಪುರದ ಮಹದೇವಮ್ಮನವರು**

ನೀವು ನಮ್ಮನ್ನಗಲಿ ಇಂದಿಗೆ (09.03.2025) ಎರಡು ವರ್ಷಗಳಾದವು ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಹಾದಿಯಲ್ಲಿ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ...

ಮಕ್ಕಳಾದ : ಶ್ರೀ ಎಸ್.ಎಂ. ನಾಗರಾಜ್ ಮತ್ತು ಶ್ರೀಮತಿ ಮಾಲತಿ ನಾಗರಾಜ್
ಶ್ರೀ ಎಸ್.ಎಂ. ಬಸವರಾಜ್ ಮತ್ತು ಶ್ರೀಮತಿ ಪೂರ್ಣಿಮ ಬಸವರಾಜ್
ಶ್ರೀ ಎಸ್.ಎಂ. ಲೋಕೇಶ್ ಮತ್ತು ಶ್ರೀಮತಿ ವೀಣಾ ಲೋಕೇಶ್
ಶ್ರೀ ಜೆ.ಚಂದ್ರಶೇಖರ್ ಮತ್ತು ಶ್ರೀಮತಿ ಅನುಸೂಯ ಚಂದ್ರಶೇಖರ್
ಸರ್ವಮಂಗಳಮ್ಮ

**ಜೆ.ಬಾಬು ರಾವ್ ನಿಧನ**



ದಾವಣಗೆರೆ ವಿಜಯನಗರ ಬಡಾವಣೆ 3ನೇ ತಿರುವು, ಶಿಬಾರದ ಹತ್ತಿರದ ವಾಸಿಗಳಾದ ಶಿವಪ್ಪ ಪೈಲ್ವಾನ್ ಇವರ ಪುತ್ರ ಜೆ.ಬಾಬು ರಾವ್ (75 ವರ್ಷ) ಇವರು ದಿನಾಂಕ 8.3.2025ರ ಶನಿವಾರ ರಾತ್ರಿ 11.40ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ತಮ್ಮಂದಿರು ಹಾಗೂ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.3.2025 ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಗಾಂಧಿನಗರ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.


## ಪ್ರಭಾವಿಗಳಿಗೆ ರನ್ಯಾ ಕಂಟಕ

**(1ನೇ ಪುಟದಿಂದ)** ಇರುವುದರಿಂದ ಸಿಬಿಐಗೆ ವಹಿಸಿ, ಚಿನ್ನ ಕಳ್ಳಸಾಗಣೆಯ ಮತ್ತಷ್ಟು ಕರ್ಮಕಾಂಡ ಬಯಲಿಗೆಳೆಯಲು ಇಲಾಖೆ ನಿರ್ಧರಿಸಿತು.

ನಗರದ ಪಂಚತಾರಾ ಹೋಟೆಲ್ ಒಂದರಲ್ಲಿ ಕಳೆದ ವರ್ಷವಷ್ಟೇ ರನ್ಯಾ ರಾವ್ ಮದುವೆ ನಡೆದಿತ್ತು. ಮದುವೆ ನಡೆದ 5 ಗಂಟೆಗಳವರೆಗೂ ಈ ಪ್ರಭಾವಿ ಸಚಿವರೊಬ್ಬರು ಉಪಸ್ಥಿತರಿದ್ದು ಎಲ್ಲ ಉಸ್ತುವಾರಿ ನೋಡಿಕೊಂಡಿದ್ದರು.

ಅಷ್ಟೇ ಅಲ್ಲ, ಆರೋಪಿ ಹೇಳಿದ ಕೆಲಸಗಳನ್ನು ಸರ್ಕಾರದ ಮಟ್ಟದಲ್ಲಿ ಈ ವ್ಯಕ್ತಿ ಮಾಡಿಸಿಕೊಡುತ್ತಿದ್ದರು ಎಂಬುದೂ ಪ್ರಾಥಮಿಕ ತನಿಖೆಯಿಂದ ಬಹಿರಂಗವಾಗಿದೆ.

ರನ್ಯಾ ರಾವ್ ನಿರಂತರವಾಗಿ ವಿದೇಶಗಳಿಗೆ ಪ್ರಯಾಣ ಮಾಡುತ್ತಲೇ ಇದ್ದರು. ಇದನ್ನೇ ಆಧಾರವಾಗಿಟ್ಟುಕೊಂಡು ಡಿಆರ್‌ಐದ ಅಧಿಕಾರಿಗಳು ತನಿಖೆ ನಡೆಸಿದಾಗ, ಆರೋಪಿಯು ಯೂರೋಪ್, ಅಮೆರಿಕ, ದುಬೈ ಸೇರಿದಂತೆ ಅನೇಕ ರಾಷ್ಟ್ರಗಳಿಗೆ ತೆರಳಿರುವುದು ಬೆಳಕಿಗೆ ಬಂದಿದೆ. ಅದರಲ್ಲೂ ನಿರಂತರವಾಗಿ ದುಬೈಗೆ ತೆರಳುತ್ತಿದ್ದುದು ಸಂಶಯಕ್ಕೆ ಎಡೆ ಮಾಡಿಕೊಟ್ಟಿತ್ತು. ಫೆಬ್ರವರಿ 2ರಿಂದ ಮಾರ್ಚ್ 3ರವರೆಗೆ ರಾವ್ ಐದು ಬಾರಿ ದುಬೈಗೆ ಭೇಟಿ ನೀಡಿದ್ದರು.

ಮಾರ್ಚ್ 3ರಂದು ದುಬೈನಿಂದ ಹಿಂತಿರುಗುತ್ತಿದ್ದಂತೆ ರನ್ಯಾ ರಾವ್ ಅವರನ್ನು ಡಿಆರ್‌ಐಆ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸಿದ ನಂತರ ಆರೋಪಿಯಿಂದ ಕೋಟ್ಯಂತರ ರೂ. ಮೌಲ್ಯದ ಚಿನ್ನ ಮತ್ತು ನಗದನ್ನು ವಶ ಪಡಿಸಿಕೊಂಡರು. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ತಪಾಸಣೆಗೆ ಒಳಪಡಿಸದೆ, ಹಿರಿಯ ಪೊಲಿಸ್ ಅಧಿಕಾರಿ ಮಗಳೆಂದು ವಿಐಪಿ ಪ್ರವೇಶ ದ್ವಾರದಿಂದ ರನ್ಯಾ ರಾವ್ ಅವರನ್ನು ಸದಾಕಾಲ ಹೊರಗೆ ಕರೆತರುತ್ತಿದ್ದ ಪೊಲಿಸ್ ಒಬ್ಬರನ್ನು ಸಹ ಬಂಧಿಸಲಾಗಿದೆ. ಆರೋಪಿಯನ್ನು ಕರೆತರಲು ಈತನಿಗೆ ಯಾರು ಸಂದೇಶ ಕೊಡುತ್ತಿದ್ದರು ಎಂಬ ಮಾಹಿತಿಯನ್ನು ತನಿಖಾ ತಂಡದ ಮುಂದೆ ಈತ ಬಿಡಿಸಿಟ್ಟಿದ್ದು, ಆ ಮಾಹಿತಿ ಕೆಲವು ಪ್ರಭಾವಿಗಳಿಗೆ ಮುಳುವಾಗಲಿದೆ.

# "ಯುಗಾದಿ–ರಂಜಾನ್ ಮತ್ತು ಮದುವೆ ಸಮಾರಂಭಗಳ ಪ್ರಯುಕ್ತ"

BSC®

# ಡಬಲ್ ಡಿಸ್ಕೌಂಟ್



**ಮಾರ್ಚ್ 6, 2025 ರಿಂದ ಅದ್ಧೂರಿ ಪ್ರಾರಂಭಗಿದೆ**

**ಎಲ್ಲಾ ಬಟ್ಟೆಗಳ ಮೇಲೆ ರಿಯಾಯಿತಿ + ವಿಶೇಷ ರಿಯಾಯಿತಿ**

**ನಮ್ಮಲ್ಲಿ ಯಾವುದೇ ಲಾಟ್ ಬಟ್ಟೆಗಳ ಮಾರಾಟವಿರುವುದಿಲ್ಲ..!**

**ಎಲ್ಲವೂ ಹೊಸದು... ಬನ್ನಿ.. ಪರೀಕ್ಷಿಸಿ... ನಂತರ ಕೊಳ್ಳಿರಿ...!**

# ಬಿ.ಎಸ್. ಚನ್ನಬಸಪ್ಪ & ಸನ್ಸ್

ಈ ಕೊಡುಗೆ ನಮ್ಮ ದಾವಣಗೆರೆಯ BSC ಸಂಸ್ಥೆಯ ಎಲ್ಲಾ ಶಾಖೆಗಳಲ್ಲಿ ಮಾತ್ರ

# ಉದರ ರೋಗಕ್ಕೆ ಸುಧಾರಿತ ಜೀವನ ಶೈಲಿಯೇ ಪರಿಹಾರ



## ಬಾಪೂಜಿ ಮಕ್ಕಳ ಆಸ್ಪತ್ರೆ ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಡಾ. ಪ್ರಕಾಶ ಮತ್ತಿಹಳ್ಳಿ

ದಾವಣಗೆರೆ,ಮಾ.8- ಹೊಟ್ಟೆಗೆ ಸಂಬಂಧಿಸಿದ ರೋಗಗಳ ಮುನ್ಸೂಚನೆಗಳನ್ನು ಬರೀ ಅಜೀರ್ಣ ಎಂದು ಉದಾಸೀನ ಮಾಡಬಾರದು ಎಂದು ಜೆಜೆಎಂಎಂಸಿ ಉದರರೋಗ ಶಸ್ತ್ರ ಚಿಕಿತ್ಸಾ ತಜ್ಞ ಡಾ.ಪ್ರಕಾಶ ಮತ್ತಿಹಳ್ಳಿ ಹೇಳಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಕಳೆದ ಗುರುವಾರ ಹಮ್ಮಿಕೊಳ್ಳಲಾಗಿದ್ದ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಉದರ ರೋಗಳು-ಉದಾಸೀನಬೇಡ' ಎಂಬ ವಿಷಯವಾಗಿ ಅವರು ಮಾತನಾಡಿದರು.

ಹೊಟ್ಟೆ ಅಥವಾ ಉದರ ಶಾಸ್ತ್ರ ಎಂದರೆ ಬಾಯಿಯಿಂದ ಗುದದ್ವಾರದವರೆಗಿನ ಜೀರ್ಣಾಂಗ ವ್ಯೂಹ, ಮೇದೋಜೀರಕ ಪಿತ್ತಕೋಶಗಳನ್ನು ಒಳಗೊಂಡ ಸಂಕೀರ್ಣ ವ್ಯವಸ್ಥೆಯಾಗಿದೆ. ಜಠರ ಮತ್ತು ಕರುಳಿನ ಸಾಮಾನ್ಯ ಸಮಸ್ಯೆಗಳು ಇವುಗಳಲ್ಲಿ ಜಠರದ ಆಮ್ಲೀಯತೆಗೆ ಸಂಬಂಧಿಸಿದ ಜಠರದುರಿತ, ಅಲ್ಸರ್ ಹುಣ್ಣು, ಪಿತ್ತಕೋಶ (ಲಿವರ್) ಸಮಸ್ಯೆಗಳು, ಸಣ್ಣ ಮತ್ತು ದೊಡ್ಡ ಕರುಳಿನ ಹಾಗೂ ಗುದನಾಳದ ರೋಗಗಳು ಮುಖ್ಯವಾದವುಗಳು.

ಎದೆ ಉರಿ, ವಾಂತಿ, ಕೆಮ್ಮು, ಗಂಟಲು ನೋವು, ಎದೆ ನೋವು, ಹೊಟ್ಟೆ ನೋವು ಇವು ಹೆಚ್ಚಿದ ಆಮ್ಲೀಯತೆಗೆ ಸಂಬಂಧಿಸಿದ ಮುಖ್ಯ ಸೂಚನೆಗಳಾಗಿವೆ. ಧೂಮಪಾನ, ಮದ್ಯಪಾನ, ಮಸಾಲೆ, ಕೊಬ್ಬು ಹೆಚ್ಚಾಗಿರುವ ಆಹಾರ, ಪಾನೀಯಗಳನ್ನು ತ್ಯಜಿಸುವುದು, ನೋವು ನಿವಾರಕ ಮಾತ್ರೆಗಳನ್ನು ಆದಷ್ಟು ಕಡಿಮೆ ಸೇವಿಸುವುದರಿಂದ ಇದನ್ನು ನಿಯಂತ್ರಿಸಬಹುದು.

ತರಕಾರಿ, ಹಣ್ಣು, ಬೇಳೆಗಳಂತಹ ಕರಗುವ, ಫೈಬರ್ ಅಧಿಕವಾಗಿರುವ ಆಹಾರಗಳನ್ನು ಸೇವಿಸಬೇಕು. ತಡರಾತ್ರಿಯ ತಿಂಡಿಗಳ ಸೇವನೆ ತಪ್ಪಿಸಬೇಕು, ವಾಂತಿಯಲ್ಲಿ ರಕ್ತ, ಕಪ್ಪು ಭೇದಿಗೆ ಅಲ್ಸರ್ ಹುಣ್ಣು ಮೂಲ ಕಾರಣವಾಗಿರಬಹುದು.ದೊಡ್ಡ ಕರುಳಿಗೆ ಸಂಬಂಧಿಸಿದ ಕರುಳಿನ ಕಿರಿಕಿರಿ, ದಿನದಿಂದ ದಿನಕ್ಕೆ ಜನರಲ್ಲಿ ಹೆಚ್ಚುತ್ತಿರುವ ಒಂದು ಸ್ಥಿತಿ. ಇದರಲ್ಲಿ ವ್ಯಕ್ತಿಯು ಹಲವಾರು ವಾರದಿಂದ ತಿಂಗಳುಗಳವರೆಗೆ ಹೊಟ್ಟೆನೋವು ಉಬ್ಬರ, ಗ್ಯಾಸ್, ಭೇದಿ ಅಥವಾ ಮಲಬದ್ಧತೆಯಿಂದ ಕಂಗೆಡ ಬಹುದು, ಇದಕ್ಕೆ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇರುವುದಿಲ್ಲ. ಆದರೆ ತಜ್ಞ ವೈದ್ಯರೊಂದಿಗೆ ಸಮಾಲೋಚನೆಯ ಅವಶ್ಯಕತೆ ಇರುತ್ತದೆ.

ಸಾಮಾನ್ಯ ಗುದನಾಳದಲ್ಲಿ ಆಗುವ ಗಾಯದಿಂದ ಮತ್ತು ಮೂಲವ್ಯಾಧಿಯಿಂದ ಮಲದಲ್ಲಿ ರಕ್ತ ಕಾಣಿಸಬಹುದು. ಪಿತ್ತಕೋಶದ ವೈಫಲ್ಯ ಮತ್ತು ಕರುಳಿನ ಕ್ಯಾನ್ಸರ್‌ನಲ್ಲೂ ಕೂಡ ರಕ್ತ ಭೇದಿ ಕಾಣಿಸಬಹುದು.

ಇನ್ನು ಪಿತ್ತಕೋಶದ ಕಾಯಿಲೆಗಳಾದ, ವೈರಸ್ ಸೋಂಕಿನ ಉರಿಯೂತ, ಪಿತ್ತಕೋಶದ ಕ್ಯಾನ್ಸರ್ ಮತ್ತು ಸಿರೋಸಿಸ್ ಎಂಬ ಪಿತ್ತಕೋಶದ ವೈಫಲ್ಯದ ಕೊನೆಯ ಸ್ಥಿತಿಯಾಗಿರುತ್ತದೆ.

ಉದರ ರೋಗ ಮುನ್ಸೂಚನೆವುಳ್ಳ ರೋಗಿಗೆ ತಜ್ಞ ವೈದ್ಯರಿಂದ ತಪಾಸಣೆ, ರೋಗ ಪತ್ತೆ ಮತ್ತು ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇರುತ್ತದೆ. ಇವುಗಳಲ್ಲಿ ಹಲವು ರೋಗಗಳನ್ನು ಔಷಧಿಗಳಿಂದ ಗುಣ ಪಡಿಸಿದರೆ ಕೆಲವಕ್ಕೆ ಶಸ್ತ್ರಚಿಕಿತ್ಸೆಯ ಅಗತ್ಯವಿರುತ್ತದೆ. ಉದರ ರೋಗ ಪತ್ತೆಗೆ ಆಧುನಿಕ ವಿಧಾನಗಳಾದ- ಸ್ಕ್ಯಾನಿಂಗ್, ಎಂಡೋಸ್ಕೋಪಿ ರಕ್ತಸ್ರಾವ ತಡೆಗೆ ಸ್ಲೀರೋಥೆರಪಿ, ಪಿತ್ತಕೋಶ ಬದಲಾವಣೆಯಂಥ ಆಧುನಿಕ ಚಿಕಿತ್ಸೆ ಬೇಕಾಗಬಹುದು. ಉದರದ ಭಾಗಗಳ ಕ್ಯಾನ್ಸರ್ ಚಿಕಿತ್ಸೆಯನ್ನು ಶಸ್ತ್ರಚಿಕಿತ್ಸೆ ಮತ್ತು ಕೀಮೋಥೆರಪಿ ಮೂಲಕ ನೀಡಲಾಗುತ್ತದೆ.

ಮತ್ತೆ ಹಲವು ಉದರ ಸಂಬಂಧಿ ರೋಗಗಳನ್ನು ನಿಯಮಿತ ತಪಾಸಣೆ ಸುಧಾರಿಸಿದ ಜೀವನ, ಆಹಾರ ಶೈಲಿ, ಅಪಾಯಕಾರಿ ರೋಗಲಕ್ಷಣಗಳ ಬಗ್ಗೆ ನಿಗಾ ಇಡುವುದರಿಂದ ಹತೋಟಿಯಲ್ಲಿಡ ಬಹುದು ಎಂದು ಅವರು ಸಲಹೆ ನೀಡಿದರು.

ಬಾಪೂಜಿ ಮಕ್ಕಳ ಆಸ್ಪತ್ರೆ ನಿರ್ದೇಶಕ ಡಾ.ಜಿ. ಗುರುಪ್ರಸಾದ್, ಹಿರಿಯ ಮಕ್ಕಳ ತಜ್ಞ ಡಾ.ಬಾಣಾಪುರ ಮಠ್, ಬಾಪೂಜಿ ಆಸ್ಪತ್ರೆ ನಿರ್ದೇಶಕರಾದ ಡಾ. ಕುಮಾರ್, ಡಾ.ಪ್ರಶಾಂತಕುಮಾರಿ, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ, ಡಾ. ರಮೇಶ್, ಡಾ.ಮೃತ್ಯುಂಜಯ ಮತ್ತಿತರರು ಉಪಸ್ಥಿತರಿದ್ದರು.

# ವಾರ್ತಾ ಇಲಾಖೆ ಸಿಬ್ಬಂದಿ ಚನ್ನಕೇಶವ ವಯೋನಿವೃತ್ತಿ - ಸನ್ಮಾನ



ದಾವಣಗೆರೆ, ಮಾ. 8 - ದಾವಣಗೆರೆ ನಗರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಈಚೆಗೆ ವಯೋ ನಿವೃತ್ತಿ ಹೊಂದಿದ ಎನ್. ಚನ್ನಕೇಶವ ಇವರಿಗೆ ಹಿರಿಯ ಸಹಾಯಕ ನಿರ್ದೇಶಕ ಬಿ. ಧನಂಜಯಪ್ಪ ಹಾಗೂ ಸಿಬ್ಬಂದಿಗಳಾದ ಜಿ. ಗಂಗಾಧರಯ್ಯ, ತಿಪ್ಪೇಸ್ವಾಮಿ, ಶ್ರೀಮತಿ ಶೈಲ, ದ್ವಿತೀಯ ದರ್ಜೆ ಸಹಾಯಕ ವೆಂಕಟೇಶ್, ಚಿತ್ರದುರ್ಗ ವಾರ್ತಾ ಇಲಾಖೆಯ ವಾಹನ ಚಾಲಕ ಚಂದ್ರಶೇಖರ್, ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕೃತರು, ರಾಷ್ಟ್ರೀಯ ಕಬಡ್ಡಿ ಕ್ರೀಡಾಪಟು, ಕಲಾವಿದ ಬಿ.ಎಸ್. ಬಸವರಾಜ್, ಶಶಿಕುಮಾರ್ ಡಿ.ಬಿ., ಎಮ್.ಸಿ. ಅಂಡ್ ಎ. ನಿಗಮದ ಅಧಿಕಾರಿ ಮಾರುತಿ ಅವರುಗಳು ಶಾಲು ಮತ್ತು ಪೇಟ ಹೂವಿನ ಹಾರ ಹಾಕಿ ಸನ್ಮಾನಿಸಿದರು.

# ಪುರುಷನ ಸಾಧನೆ ಹಿಂದೆ ಮಹಿಳೆಯ ಪಾತ್ರ ಹಿರಿದು



## ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ

ದಾವಣಗೆರೆ, ಮಾ.8 - ಪುರುಷನ ಸಾಧನೆಯ ಹಿಂದೆ ಮಹಿಳೆಯ ಪಾತ್ರ ಹಿರಿದು. ಮಹಿಳೆಯರು ಆರ್ಥಿಕವಾಗಿ ಮುನ್ನಡೆ ಸಾಧಿಸಿದರೆ ಪುರುಷನಿಗೆ ಸರಿ ಸಮಾನಳಾಗಿ ಬದುಕು ಸಾಗಿಸಲು ಸಾಧ್ಯವಿದೆ ಎಂದು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ನಬಾರ್ಡ್ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪುರುಷನ ಸಾಧನೆಯಿಂದ ಮಹಿಳೆಯ ಪಾತ್ರ ಅತ್ಯಂತ ಹಿರಿದಾದುದು. ಮಹಿಳೆಯಿಲ್ಲದ ಪುರುಷನ ಜೀವನ ಪರಿಪೂರ್ಣವಾಗಿರಲು ಸಾಧ್ಯವಿಲ್ಲ ಎಂದರು.

ಮನೆಯಲ್ಲಿ ಶಾಂತಿ, ನೆಮ್ಮದಿ ನೆಲಸಲು ಮೊದಲು ಮಹಿಳೆಯರ ಸೇವೆಯನ್ನು ಗೌರವಿಸಬೇಕು. ಅವರನ್ನು ಸಂತೋಷವಾಗಿ ಇಟ್ಟುಕೊಳ್ಳಬೇಕು. ನಾನು ಬದಲಾದರೆ, ದೇಶ ಬದಲಾಗುತ್ತದೆ. ಗಾಂಧೀಜಿ ಹೇಳುವಂತೆ ಮೊದಲು ನಿನ್ನಲ್ಲಿ ಬದಲಾವಣೆ ಕಂಡು ಕೊಂಡರೆ ಮತ್ತೊಬ್ಬರಲ್ಲಿ ಬದಲಾವಣೆ ಕಾಣಲು ಸಾಧ್ಯ. ದೌರ್ಜನ್ಯ ತಡೆ ಹೆಣ್ಣು ಮಕ್ಕಳಿಂದ ಸಾಧ್ಯವಿದೆ.

ಸ್ವಾಭಿಮಾನಿ ಬದುಕು ನಿಮ್ಮದಾಗಲಿ ಎಂದು ಆಶಿಸಿದರು.

ಮಹಿಳೆಗೆ ಯಾವುದೇ ಪ್ರಶಸ್ತಿ, ಪಾರಿತೋಷಕ ನೀಡುವುದು ಬೇಕಾಗಿಲ್ಲ. ಅವರಿಗೆ ಗೌರವ ಕೊಡುವ ಕೆಲಸವನ್ನು ಎಲ್ಲರೂ ಮಾಡಬೇಕಾಗಿದೆ. ಸಮಾಜದಲ್ಲಿ ಸಿಗಬಹುದಾದ ಎಲ್ಲಾ ಸೌಲಭ್ಯಗಳು ಸಿಗುವಂತಾಗಬೇಕು. ಬಹು ಮುಖ್ಯವಾಗಿ ಸ್ವಾತಂತ್ರ್ಯ ನೀಡಬೇಕೆಂದರು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕಿ ರೇಷ್ಮ ಕೌಸರ್ ಪ್ರಾಸ್ತಾವಿಕವಾಗಿ ಮಾತನಾಡಿ, ಇತಿಹಾಸದಲ್ಲಿ ಕಾಣುವುದು ಪುರುಷ ಪ್ರಧಾನ ಸಮಾಜವನ್ನು. ಮಹಿಳೆ ಇಂದು ಎಲ್ಲಾ ರಂಗಗಳಲ್ಲೂ ಪ್ರಗತಿ ಸಾಧಿಸಿದ್ದಾಳೆ. ಪುರುಷರ ಬೆಂಬಲ ಅತ್ಯಗತ್ಯ ಎಂದರು.

ಪುರುಷರನ್ನು ದೂಷಿಸದೇ ಪರಸ್ಪರ ಸಹಬಾಳ್ವೆ ನಡೆಸಲು ಸಹಕರಿಸಬೇಕು. ಕುಟುಂಬ ನಿರ್ವಹಣೆ ಕೂಡ ಒಂದು ದೊಡ್ಡ ಸಾಧನೆ. ರಾಜಕೀಯದಲ್ಲೂ ಕೂಡ ಮಹಿಳೆ ಮೇಲುಗೈ ಸಾಧಿಸುತ್ತಿದ್ದು, ಸ್ಥಳೀಯ ಸಂಸ್ಥೆಗಳು, ಪಂಚಾಯತಿ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದೆ ಎಂದು ಹೇಳಿದರು.

ಇದೇ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ 2023-24 ನೇ ಸಾಲಿನ ಅಸಾಧಾರಣ ಸಾಧನೆ ಮಾಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ತನಿಷ್ಕಾ, ಸುಚಿತ್ರಾ, ಭಾವನ, ಸಾನ್ವಿ, ಭಾಗ್ಯಲಕ್ಷ್ಮಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಬಾರ್ಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ರಶ್ಮಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ರಾಜಾನಾಯ್ಕ, ಜಿಲ್ಲಾ ನಿರೂಪಣಾಧಿಕಾರಿ ಗುರುಪ್ರಸಾದ್, ದಾವಣಗೆರೆ ತಾಲ್ಲೂಕು ಸಿಡಿಪಿಓ ಅಭಿಕುಮಾರ್, ನಿರ್ಮಲ, ಧೀರೇಂದ್ರ ಕುಮಾರ್, ಜ್ಯೋತಿ, ಪೂರ್ಣಿಮ, ಪ್ರಿಯದರ್ಶಿನಿ, ತಾಲ್ಲೂಕು ಮಹಿಳಾ ಸಂಘಗಳ ಒಕ್ಕೂಟದ ಪದಾಧಿಕಾರಿಗಳಾದ ಶಕುಂತಲಮ್ಮ, ಬಿ.ಸಿ. ಮಂಗಳ, ಮಹಿಳಾ ಸ್ತ್ರೀ ಶಕ್ತಿ ಸಂಘಗಳ ಮೇಲ್ವಿಚಾರಕರು, ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಗ್ಲಾಕೋಮಾ: ದೃಷ್ಟಿ ದೋಚುವ ಮೌನ ದೃಷ್ಟಿಚೋರ

ಗ್ಲಾಕೋಮಾ ಎಂಬುದು ದೃಷ್ಟಿ ನರವನ್ನು ಹಾನಿಗೊಳಿಸುವ ಪ್ರಗತಿಶೀಲ ಕಣ್ಣಿನ ಕಾಯಿಲೆಯಾಗಿದ್ದು, ಹೆಚ್ಚಿದ ಕಣ್ಣಿನ ಒತ್ತಡ (IOP) ಇದರ ಪ್ರಮುಖ ಕಾರಣವಾಗಿದೆ. ಇದು ವಿಶ್ವದಾದ್ಯಂತ ಅಂಧತ್ವಕ್ಕೆ ಕಾರಣ ವಾಗುವ ಪ್ರಮುಖ ಕಾಯಿಲೆಗಳಲ್ಲಿ ಒಂದಾಗಿದೆ. ಕಣ್ಣಿನ ಒಳಗೆ ಅಕ್ಯುಯಸ್ ಹ್ಯೂಮರ್ (aqueous humor) ಎಂಬ ದ್ರವದ ಸರಿಯಾದ ನಿರ್ಗಮನವಾಗದಿದ್ದರೆ, ಒತ್ತಡ ಹೆಚ್ಚಾಗಿ ದೃಷ್ಟಿನರ ಹಾನಿಯಾಗುತ್ತದೆ. ಈ ನರ ಕಣ್ಣು ಮತ್ತು ಮೆದುಳಿನ ನಡುವೆ ದೃಷ್ಟಿ ಮಾಹಿತಿಯನ್ನು ಕಳುಹಿಸಲು ಮುಖ್ಯವಾಗಿದೆ. ದೃಷ್ಟಿ ನರಕ್ಕೆ ಒಮ್ಮೆ ಹಾನಿಯಾದರೆ, ಕಳೆದುಹೋದ ದೃಷ್ಟಿಯನ್ನು ಮರಳಿ ಪಡೆಯಲಾಗದು.

**ಕಾರಣಗಳು ಮತ್ತು ಅಪಾಯದ ಅಂಶಗಳು:**


ಗ್ಲಾಕೋಮಾ ಉಂಟಾಗಲು ಹಲವಾರು ಕಾರಣಗಳಿವೆ, ಆದರೆ ಇದರಲ್ಲಿ ಸಾಮಾನ್ಯವಾದುದು ಪ್ರಾಥಮಿಕ ಓಪನ್-ಆಂಗಲ್ ಗ್ಲಾಕೋಮಾ (Primary Open-Angle Glaucoma). ಇದು ನಿಧಾನವಾಗಿ ಕಣ್ಣಿನ ದ್ರವ ಹೊರಹೋಗುವ ಮಾರ್ಗದಲ್ಲಿ ಅಡ್ಡಿಯುಂಟಾಗುವುದರಿಂದ ಉಂಟಾಗುತ್ತದೆ. ಇನ್ನೊಂದು ಪ್ರಬಲ ರೀತಿ ಆಂಗಲ್-ಕ್ಲೋಸರ್ ಗ್ಲಾಕೋಮಾ (Angle-Closure Glaucoma), ಇದು ತಕ್ಷಣವೇ ಕಣ್ಣಿನ ಒತ್ತಡ ಹೆಚ್ಚಾಗಿಸುವುದರಿಂದ ತುರ್ತು ಚಿಕಿತ್ಸೆ ಅಗತ್ಯವಿರುತ್ತದೆ.

**ಗ್ಲಾಕೋಮಾ ಹೆಚ್ಚಿಸುವ ಕೆಲವು ಅಪಾಯಕಾರಿ ಅಂಶಗಳು:**

- 40 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸು
- ಕುಟುಂಬದಲ್ಲಿ ಗ್ಲಾಕೋಮಾ ಇತಿಹಾಸ
- ಹೆಚ್ಚಿದ ಕಣ್ಣಿನ ಒತ್ತಡ
- ಮಧುಮೇಹ ಮತ್ತು ರಕ್ತದೊತ್ತಡ
- ಸ್ಟಿರಾಯ್ಡ್ ಔಷಧಿಯ ದೀರ್ಘಕಾಲಿನ ಬಳಕೆ
- ಕಣ್ಣಿಗೆ ಪೆಟ್ಟಾದ ಇತಿಹಾಸ

ನಿಯಮಿತ ಕಣ್ಣಿನ ಪರೀಕ್ಷೆ ಮತ್ತು ಸ್ಕ್ರೀನಿಂಗ್‌ನ ಮಹತ್ವ

ಗ್ಲಾಕೋಮಾವನ್ನು 'ಮೌನ ದೃಷ್ಟಿಚೋರ' ಎಂದು




ಕರೆಯಲಾಗುತ್ತದೆ. ಏಕೆಂದರೆ ಇದು ಆರಂಭಿಕ ಹಂತದಲ್ಲಿ ಯಾವುದೇ ಸ್ಪಷ್ಟ ಲಕ್ಷಣಗಳಿಲ್ಲದೇ ನಿಧಾನವಾಗಿ ದೃಷ್ಟಿ ನಷ್ಟವನ್ನು ಉಂಟುಮಾಡುತ್ತದೆ. ಆದ್ದರಿಂದ, 40 ವರ್ಷಕ್ಕಿಂತ ಮೇಲ್ಪಟ್ಟವರು ಅಥವಾ ಅಪಾಯದ ಅಂಶಗಳು ಇರುವವರು ನಿಯಮಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ.

**ಕಣ್ಣಿನ ಪರೀಕ್ಷೆಯಲ್ಲಿ ವೈದ್ಯರು ಈ ಕೆಳಗಿನ ಪರೀಕ್ಷೆಗಳನ್ನು ನಡೆಸುತ್ತಾರೆ:**

ಟೋನೋಮೆಟ್ರಿ (Tonometry) – ಕಣ್ಣಿನ ಒತ್ತಡವನ್ನು ಅಳೆಯುತ್ತದೆ. ಆಫ್ತಾಲ್ಮೋಸ್ಕೋಪಿ (Ophthalmoscopy) – ದೃಷ್ಟಿನರದ ಸ್ಥಿತಿಯನ್ನು ಪರೀಕ್ಷಿಸುತ್ತದೆ.

ವಿಷುಯಲ್ ಫೀಲ್ಡ್ ಟೆಸ್ಟಿಂಗ್ (Visual Field Testing) – ವೀಕ್ಷಣ ಕ್ಷೇತ್ರದ ಹಾನಿಯನ್ನು ಮೌಲ್ಯಮಾಪನ ಮಾಡುತ್ತದೆ. ಆಪ್ಟಿಕಲ್ ಕೊಹರೆನ್ಸ್ ಟೊಮೋಗ್ರಫಿ (OCT) – ದೃಷ್ಟಿ ನರ ಮತ್ತು ನೇತ್ರ ಪಟಲದ (Retina) ತಾಂತ್ರಿಕ ಚಿತ್ರಣ ನೀಡುತ್ತದೆ.

ನಿಯಮಿತ ಕಣ್ಣಿನ ಪರೀಕ್ಷೆಯ ಮೂಲಕ ಗ್ಲಾಕೋಮಾವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಬಹುದು ಮತ್ತು ಗಂಭೀರ ದೃಷ್ಟಿ ಹಾನಿ ತಪ್ಪಿಸಬಹುದಾಗಿದೆ.

ಗ್ಲಾಕೋಮಾ ಚಿಕಿತ್ಸಾ ವಿಧಾನಗಳು ಗ್ಲಾಕೋಮಾವನ್ನು ಸಂಪೂರ್ಣವಾಗಿ ಗುಣಪಡಿಸಲಾಗದು, ಆದರೆ ಅದನ್ನು ನಿಯಂತ್ರಿಸಲು ಮತ್ತು ದೃಷ್ಟಿ ಕಳೆದುಕೊಳ್ಳುವುದನ್ನು ತಡೆಯಲು ಚಿಕಿತ್ಸೆ ಲಭ್ಯವಿದೆ.

**ಔಷಧಗಳು** – ಕಣ್ಣಿನ ಹನಿಗಳು (Eye Drops) ದ್ರವ ಉತ್ಪಾದನೆಯನ್ನು ಕಡಿಮೆ ಮಾಡುವ ಅಥವಾ ನಿರ್ಗಮನ ಸುಗಮಗೊಳಿಸುವ ಮೂಲಕ ಕಣ್ಣಿನ ಒತ್ತಡವನ್ನು ಇಳಿಸಬಹುದು.

ಲೇಸರ್ ಚಿಕಿತ್ಸೆ – ಸೆಲೆಕ್ಟಿವ್ ಲೇಸರ್ ಟ್ರಬೆಕುಲೋಪ್ಲಾಸ್ಟಿ (SLT) ಮತ್ತು ಲೇಸರ್ ಇರಿಡೋಟಮಿ (Laser Iridotomy) ಮಾರ್ಗವಾಗಿ ಕಣ್ಣಿನ ದ್ರವ ನಿರ್ಗಮನ ಸುಧಾರಿಸಲಾಗುತ್ತದೆ.

**ಶಸ್ತ್ರಚಿಕಿತ್ಸೆ** – ಔಷಧಿಗಳು ಮತ್ತು ಲೇಸರ್ ಚಿಕಿತ್ಸೆ ಫಲಕಾರಿಯಾಗದಿದ್ದರೆ, ಟ್ರಬೆಕುಲೆಕ್ಟಮಿ (Trabeculectomy) ಅಥವಾ ಮಿನಿಮಲಿ ಇನ್ವೇಸಿವ್ ಗ್ಲಾಕೋಮಾ ಸರ್ಜರಿ (MIGS) ತಂತ್ರವನ್ನು ಬಳಸಲಾಗುತ್ತದೆ.

**ಗ್ಲಾಕೋಮಾ ಚಿಕಿತ್ಸೆಯಿಲ್ಲದಿದ್ದರೆ ಏನಾಗಬಹುದು?**

ಗ್ಲಾಕೋಮಾ ಚಿಕಿತ್ಸೆ ಪಡೆಯದಿದ್ದರೆ, ಇದು ನಿಧಾನವಾಗಿ ಪರಿಧಿ (peripheral vision) ನಷ್ಟದಿಂದ ಪ್ರಾರಂಭವಾಗಿ ಸಂಪೂರ್ಣ ಅಂಧತ್ವಕ್ಕೆ ಕಾರಣವಾಗಬಹುದು. ಕ್ಯಾಟರಾಕ್ಟ್ (ಕಣ್ಣಿನ ಪೊರೆ)ಗೆ ಶಸ್ತ್ರಚಿಕಿತ್ಸೆ ಮೂಲಕ ಪರಿಹಾರವಿದೆ, ಆದರೆ ಗ್ಲೂಕೋಮಾದಲ್ಲಿ ದೃಷ್ಟಿ ಹಾನಿಯಾದ ನಂತರ ಅದನ್ನು ಮರಳಿ ಪಡೆಯಲಾಗದು.

ಗ್ಲೂಕೋಮಾ ತಡೆಗಟ್ಟಲು ಏಕೈಕ ಮಾರ್ಗ, ಸಮಯಮಾನದ ತಪಾಸಣೆ ಮತ್ತು ಮುಂಚಿನ ಹಂತದಲ್ಲಿಯೇ ಚಿಕಿತ್ಸೆಯನ್ನು ಪ್ರಾರಂಭಿಸುವುದು. ನಿಯಮಿತ ಕಣ್ಣಿನ ಪರೀಕ್ಷೆಯಿಂದ ಈ ಮೌನ ದೃಷ್ಟಿ ನಷ್ಟವನ್ನು ತಡೆಯಬಹುದು ಮತ್ತು ಉತ್ತಮ ಗುಣಮಟ್ಟದ ಜೀವನವನ್ನು ಕಾಪಾಡಬಹುದು. ಮಾರ್ಚ್ 9ರಿಂದ ಮಾರ್ಚ್ 5 ನೇ ತಾರೀಕಿನ ವರೆಗೆ ಗ್ಲಾಕೋಮಾ ವಾರವಾಗಿ ಗಮನಿಸಲಾಗುತ್ತಿದೆ. ಈ ಬಗ್ಗೆ ಜನಜಾಗೃತಿ ಮೂಡಿಸಿ, ತಕ್ಷಣವೇ ಕಣ್ಣಿನ ಪರೀಕ್ಷೆ ಮಾಡಿಸಿ, ನಿಮ್ಮ ದೃಷ್ಟಿಯನ್ನು ಸುರಕ್ಷಿತವಾಗಿಡಿ.

**ಡಾ. ಅಭಿಷೇಕ್ ಜಿ.ಯು.** ನೇತ್ರ ರೋಗ ತಜ್ಞರು,
ಐ ಕೇರ್ ಸೆಂಟರ್ (311 / ಬಿ,
ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ)

# ಕಿಡ್‌ಜೀ ಪ್ರೀ ಸ್ಕೂಲ್‌ನಲ್ಲಿ ವಿಶ್ವ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 8 - ನಗರದ ಕಿಡ್‌ಜೀ ಪ್ರೀ ಸ್ಕೂಲ್‌ನಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಯಿತು. ಪ್ರಾಂಶುಪಾಲರಾದ ಶ್ರೀಮತಿ ರೂಪಾ ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜೆಜೆಎಂ ಕಾಲೇಜಿನ ಡಾ. ಸಂಧ್ಯಾರಾಣಿ ಮತ್ತು ತಂಡದವರು ಆಗಮಿಸಿ, ಶಾಲೆಯ ಮಹಿಳಾ ಶಿಕ್ಷಕರು ಮತ್ತು ಮಹಿಳಾ ಪೋಷಕರ ಆರೋಗ್ಯ ತಪಾಸಣೆ ನಡೆಸಿ, ಸರ್ವೈಕಲ್ ಕ್ಯಾನ್ಸರ್ ಬಗ್ಗೆ ಪೋಷಕರಿಗೆ ಮಾಹಿತಿ ನೀಡಿದರು.

# ಬೆಂಗಳೂರಿನಲ್ಲಿ ನಾಳೆ ರೈತ ಕೃಷಿ ಕಾರ್ಮಿಕರ ಹೋರಾಟ

ದಾವಣಗೆರೆ, ಮಾ. 8- ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ, ಕನಿಷ್ಠ ಬೆಂಬಲ ಬೆಲೆ ಖಾತ್ರಿ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾ.10ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಯು ರಾಜ್ಯಮಟ್ಟದ ಬೃಹತ್ ಹೋರಾಟ ನಡೆಸಲಿದೆ.

ಅಂದು ಬೆಳಗ್ಗೆ 11 ಗಂಟೆಗೆ ಫ್ರೀಡಂ ಪಾರ್ಕಿನಲ್ಲಿ ನಡೆಯುವ ಪ್ರತಿಭಟನಾ ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿ ಸಂಘಟನೆ ರಾಜ್ಯ ಕಾರ್ಯದರ್ಶಿ ಬಿ. ಭಗವಾನ್ ರೆಡ್ಡಿ, ರಾಜ್ಯ ಮಂಡಳಿ ಸದಸ್ಯೆ ಡಾ. ದೀಪಾ ಪಾಲ್ಗೊಳ್ಳುವರು ಎಂದು ಎಐಕೆಕೆಎಂಎಸ್ ರಾಷ್ಟ್ರೀಯ ಉಪಾಧ್ಯಕ್ಷ ಡಾ. ಸುನೀತ್ ಕುಮಾರ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದೇಶದ ರೈತರ ಉದ್ಧಾರವೇ ನಮ್ಮ ಗುರಿ ಎನ್ನುವ ಕೇಂದ್ರ ಸರ್ಕಾರವು ಹೊಸ ಕೃಷಿ ಮಾರುಕಟ್ಟೆ ನೀತಿ ಜಾರಿಗೊಳಿಸುವ ಮೂಲಕ ಖಾಸಗಿ ಬಂಡವಾಳಿಗರಿಗೆ ಅನುಕೂಲ ಮಾಡಲು ಹೊರ ಟಿದೆ. ಸರ್ಕಾರವೇ ರಚಿಸಿದ ಸ್ವಾಮಿನಾಥನ್ ವರದಿಯನ್ನು ಕಸದ ಬುಟ್ಟಿಗೆ ಹಾಕಲಾಗುತ್ತಿದೆ ಎಂದು ದೂರಿದರು.

ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ಕೊಡಲು ನಿರಾಕರಿಸುತ್ತಿರುವ ಸರ್ಕಾರಗಳು, ಕಾರ್ಪೊರೇಟ್ ಮನೆತನಗಳಿಗೆ ಲಕ್ಷಾಂತರ ಎಕರೆ ಜಮೀನನ್ನು ರೈತರಿಂದ ಕಸಿದು ಕೊಡುತ್ತಿವೆ. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 3,573 ರೈತರು ಆತ್ಮಹತ್ಯೆಗೆ ಶರಣಾಗಿದ್ದು, ಆಡಳಿತಾರೂಢ ಕಾಂಗ್ರೆಸ್ ಕೂಡ ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ ಕಿಡಿಕಾರಿದರು.

ನರೇಗಾ ಯೋಜನೆಯಡಿ 200 ಮಾನದ ದಿನಗಳ ಕೆಲಸ ಹಾಗೂ 600 ರೂ. ಕನಿಷ್ಠ ಕೂಲಿ ನಿಗಧಿಪಡಿಸಬೇಕು. ಹೊಸ ಕೃಷಿ ಮಾರುಕಟ್ಟೆ ನೀತಿಯನ್ನು ಕೈಬಿಡಬೇಕು. ಸ್ವಾಮಿನಾಥನ್ ವರದಿಯಂತೆ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸಬೇಕು ಎಂದರು.

ಬೀಜ, ರಸಗೊಬ್ಬರ, ಕೀಟನಾಶಕಗಳಂತಹ ಕೃಷಿ ಒಳಸುರಿಗಳನ್ನು ಅತ್ಯಂತ ಕಡಿಮೆ ದರದಲ್ಲಿ ಸರಬರಾಜು ಮಾಡಬೇಕು. ವಿದ್ಯುತ್ ಕಾಯ್ದೆ-2023ನ್ನು ಕೂಡಲೇ ರದ್ದುಗೊಳಿಸಿ, ವಿದ್ಯುತ್ ಖಾಸಗೀಕರಣ ಹಿಂತೆಗೆದುಕೊಳ್ಳಬೇಕು. ರೈತರ ಸಾಲ ಮನ್ನಾ ಮಾಡುವ ಜೊತೆಗೆ 60 ವರ್ಷ ಮೇಲ್ಪಟ್ಟ ರೈತರಿಗೆ ಪಿಂಚಣಿ ನೀಡಬೇಕು ಎಂದು ಅವರು ಒತ್ತಾಯಿಸಿದರು.

ನಮ್ಮ ಜಿಲ್ಲೆಯಲ್ಲಿ ಅತೀ ಹೆಚ್ಚು ಬೆಳೆಯಲಾಗುವ ಮೆಕ್ಕೆಜೋಳ ಮತ್ತು ಭತ್ತಕ್ಕೆ ಬೆಂಬಲ ಬೆಲೆ ಘೋಷಿಸಿ, ಕೂಡಲೇ ಖರೀದಿ ಕೇಂದ್ರ ತೆರೆಯಬೇಕು ಎಂಬುದು ಸೇರಿದಂತೆ ಅನೇಕ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. ಸಂಘಟನೆಯ ಜಿಲ್ಲಾಧ್ಯಕ್ಷ ಮಧು ತೊಗಲೇರಿ, ಜಿಲ್ಲಾ ಕಾರ್ಯದರ್ಶಿ ನಾಗಸ್ಮಿತ, ಮಂಜುನಾಥ ರೆಡ್ಡಿ, ಸೋಮಶೇಖರಪ್ಪ, ಮಂಜಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

# ತಾರೇಹಳ್ಳಿಯಲ್ಲಿ 12ರಂದು ಶ್ರೀ ರಂಗನಾಥಸ್ವಾಮಿ ರಥೋತ್ಸವ



ಜಗಳೂರು, ಮಾ. 8- ತಾಲ್ಲೂಕಿನ ತಾರೇಹಳ್ಳಿ ಗ್ರಾಮದ ಶ್ರೀ ರಂಗನಾಥ ಸ್ವಾಮಿ ರಥೋತ್ಸವವು ಇದೇ ದಿನಾಂಕ 12ರ ಬುಧವಾರ ಸಂಜೆ 7 ಗಂಟೆಗೆ ನಡೆಯಲಿದೆ.

ನಾಳೆ ದಿನಾಂಕ 9ರ ಭಾನುವಾರ ಸರ್ಪ ವಾಹನ ಉತ್ಸವ, ದಿನಾಂಕ 10ರ ಸೋಮವಾರ ಗಜ ವಾಹನ ಉತ್ಸವ ಹಾಗೂ 11ರ ಮಂಗಳವಾರ ಗರುಡ ವಾಹನ ಉತ್ಸವ ನಡೆಯಲಿದೆ. ದಿನಾಂಕ 13ರ ಗುರುವಾರ ಜಾತ್ರೆ, 14ರ ಶುಕ್ರವಾರ ಓಕಳಿ ಉತ್ಸವ ನಡೆಯಲಿದೆ ಎಂದು ದೇವಸ್ಥಾನ ಸೇವಾ ಸಮಿತಿಯವರು ತಿಳಿಸಿದ್ದಾರೆ.

**ತಾರಾದಾಸ್ ಜ್ಯುವೆಲರ್ಸ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**

ವಿನೂತನವಾಗಿ ಪ್ರಾರಂಭವಾಗುತ್ತಿರುವ ಬಂಗಾರದ ಅಂಗಡಿಗೆ ಕೆಲಸ ಮಾಡಲು 18 ವರ್ಷದ ಮೇಲ್ಪಟ್ಟ ಹುಡುಗ & ಹುಡುಗಿಯರು ಬೇಕಾಗಿದ್ದಾರೆ . ಬಂಗಾರದ ಅಂಗಡಿಯಲ್ಲಿ ಕೆಲಸದ ಅನುಭವ ಇದ್ದರೆ ಪ್ರಮುಖ ಆದ್ಯತೆ. ವಿದ್ಯಾರ್ಹತೆ : ಪಿಯುಸಿ ಮತ್ತು ಮೇಲ್ಪಟ್ಟು ಕಂಪ್ಯೂಟರ್ ಬಳಕೆ ಬಂದರೆ ಉತ್ತಮ. ತರಬೇಕಾದ ದಾಖಲಾತಿಗಳು :
1) ಒಂದು ಫೋಟೋ 2) ಆಧಾರ್ ಕಾರ್ಡ್ ಕಲರ್ ಜೆರಾಕ್ಸ್ 3) ರೆಸ್ಯೂಮ್.
ವಿಳಾಸ : 689/1- ಎ, ಮಂಡಿಪೇಟೆ, ದಾವಣಗೆರೆ.
ಸಂಪರ್ಕಿಸಿ : 78923 14633, 81528 45678

## ಜಿಹ್ನೇಶ್ವರ ಮಂದಿರದಲ್ಲಿ ಮಹಿಳಾ ದಿನಾಚರಣೆ

ಹೊಂಡದ ರಸ್ತೆ ಸ್ವಕುಳಸಾಳಿ ಶ್ರೀ ಜಿಹ್ನೇಶ್ವರ ಮಹಿಳಾ ಮಂಡಳಿ (ನೇಕಾರ) ಯಿಂದ ಇಂದು ಸಂಜೆ 4ಕ್ಕೆ ಶ್ರೀ ಜಿಹ್ನೇಶ್ವರ ಮಂದಿರದಲ್ಲಿ ವಿಶ್ವ ಮಹಿಳಾ ದಿನಾಚರಣೆ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸುಜಾತಾ ರಾಮಚಂದ್ರ ರೋಖಡೆ, ಸ್ವಕುಳ ಸಾಳಿ ಶ್ರೀ ಜಿಹ್ನೇಶ್ವರ ಮಹಿಳಾ ಮಂಡಳಿ ಅಧ್ಯಕ್ಷರು ವಹಿಸಲಿದ್ದು, ವೇದಿಕೆ ಮೇಲಿರುವ ಗಣ್ಯರಿಂದ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಲಾಗವುದು. ಮುಖ್ಯ ಅತಿಥಿಗಳಾಗಿ ಶ್ರೀಮತಿ ನಯನ ಪ್ರಶಾಂತ ಜಿಂದೆ ಭಾಗವಹಿಸಲಿದ್ದು, ಶ್ರೀಮತಿ ಪದ್ಮಾವತಿ ವಾಂಜ್ರೆ, ಶ್ರೀಮತಿ ವಿಜಯಾ ಧರ್ಮರಾಜ್ ಏಕಬೋಟೆ ಉಪಸ್ಥಿತರಿರುವರು. ಹಿರಿಯ ದಂಪತಿಗಳಿಗೆ ಹಾಗೂ ವಿದ್ಯಾಭ್ಯಾಸದಲ್ಲಿ ಸಾಧನೆಗೈದವರಿಗೆ ಸನ್ಮಾನಿಸಲಾಗುವುದು.

**ಕ್ರಯಪತ್ರ ಕಳೆದಿದೆ**

ಶ್ರೀಮತಿ ನಮಿತಾ ವಿವೇಕ್ ಕೋಂ ಎಸ್.ಸಿ. ವಿವೇಕಾನಂದ #189/12, ಕೆ.ಬಿ. ಬಡಾವಣೆ, 1ನೇ ಕ್ರಾಸ್, ದಾವಣಗೆರೆ ಸಿಟಿ ವಾಸಿಯಾದ ನಾನು ನನ್ನ ಹೆಸರಿನ ದಾವಣಗೆರೆ ಸಿಟಿ ಯರಗುಂಟೆಯಲ್ಲಿ ಬರತಕ್ಕ ಸೈಟ್ ನಂ. 15 ಡೋರ್ ನಂ. 725/15, 30x50 ಅಳತೆಯುಳ್ಳ ನಿವೇಶನವು ದಾವಣಗೆರೆ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಈ ಹಿಂದೆ ದಿನಾಂಕ : 4.3.2015 ರಂದು 1ನೇ ಪುಸ್ತಕ ಡಿವಿಜಿ - 18912-2014-15 ಸಿ.ಡಿ.ನಂ. ಡಿ. ವಿ.ಜಿಡಿ 376 ನೇದ್ದರಲ್ಲಿ ನಂಬರಾಗಿ ರಿಜಿಸ್ಟ್ರಾರ್ ಮಾಡಿಸಿಕೊಟ್ಟಿರುವ ಖಾಲಿ ನಿವೇಶನದ ಕ್ರಯಪತ್ರಗಳು ದಿನಾಂಕ : 1.10.2024 ರಂದು ಅಶೋಕ ಟಾಕೀಸ್ ಹತ್ತಿರ ಜೆರಾಕ್ಸ್ ಮಾಡಿಸುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 90086 64574

**HARINI PU COLLEGE**
HAGARI BOMMANAHALLI. VIJAYANAGARA DIST
**FACULTY REQUIRED**
Principal/ Administative offcers and Lecturers
**Subjects: PHYSICS, CHEMISTRY, MATHEMATICS, BIOLOGY.**
Experience: For Lecturers Minimum of 5 years of **Teaching PUC/CET/NEET/JEE.**
For principal/administrative officer, a minimum of 4 years of experience in administration of PU COLLEGE.
# FOR ONLINE INTERVIEW
Contact : 94499 80200, 99863 40867

**ನ್ಯೂರೋಥೆರಪಿ ಕಲಿಯಿರಿ**
**ಕೈತುಂಬಾ ಸಂಪಾದನೆ ಮಾಡಿರಿ...**
* ನಿರುದ್ಯೋಗಿಗಳಿಗೆ ಸುವರ್ಣಾವಕಾಶ. * ಆರೋಗ್ಯ ಕ್ಷೇತ್ರದಲ್ಲಿ ಸೇವೆ ಮಾಡಬಯಸುವವರಿಗೆ.
* ಸ್ವಯಂ ಉದ್ಯೋಗ/ಪಾರ್ಟ್ ಟೈಮ್ ಮಾಡುವವರಿಗೆ.
* ಹೋಮ್‌ಕೇರ್, ವೃದ್ಧಾಶ್ರಮಗಳಲ್ಲಿ ಸೇವೆ ಮಾಡುವವರಿಗೆ.
* ತಮ್ಮ ಮನೆಯ ಮಕ್ಕಳಿಂದ ವಯೋವೃದ್ಧರಿಗೆ ಮನೆಯಲ್ಲಿಯೇ ಪರಿಣಾಮಕಾರಿ ಚಿಕಿತ್ಸೆ ನೀಡಬಯಸುವವರಿಗೆ.
* ಲಕ್ಷಾಂತರ ರೂಪಾಯಿ ಖರ್ಚು ಮಾಡಿಯೂ ಕೂಡಾ ಯಾವುದೇ ಫಲ ಸಿಗದೇ ನಿರಾಶೆ ಆದವರಿಗೆ ಭರವಸೆಯ ಚಿಕಿತ್ಸೆ.
* 100% ಅಡ್ಡ ಪರಿಣಾಮ ಇಲ್ಲದೆ ತೂಕ ಕಡಿಮೆ ಮಾಡಿಕೊಳ್ಳುವವರಿಗೆ.
ಇಂದೇ ಸಂಪರ್ಕಿಸಿ :
ಅಶೋಕ್ ವಿ.ಕೆ., ನ್ಯೂರೋಥೆರಪಿಸ್ಟ್ (LMNT)
ನವಚೇತನ ವೆಲ್‌ನೆಸ್ ಸೆಂಟರ್, ಎಂ.ಸಿ.ಸಿ. "ಬಿ" ಬ್ಲಾಕ್, ದಾವಣಗೆರೆ.
ಸಮಯ : 10 ರಿಂದ 1.30ರವರೆಗೆ ಫೋ. : 99726 00713

**ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆಯಲ್ಲಿ ಎಲ್ಲಾ ಅನುಕೂಲವನ್ನು ಹೊಂದಿರುವ 10 ರೂಮ್ (Attached Bathroom) ಇರುವ ನೂತನ ಕಟ್ಟಡವು ಕಾಲೇಜಿಗೆ ಅಥವಾ ಪಿಜಿ ನಡೆಸಲು ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
96118 66449

## ಇಂದು ಶ್ರೀ ಗುಳ್ಳಮ್ಮದೇವಿ ದೇವಸ್ಥಾನದ 7ನೇ ವರ್ಷದ ವಾರ್ಷಿಕೋತ್ಸವ



ದಾವಣಗೆರೆ : ಶ್ರೀ ಶ್ರೀನಿವಾಸ ಸಂಘದಿಂದ ಶ್ರೀ ಗುಳ್ಳಮ್ಮದೇವಿ ದೇವಸ್ಥಾನದ 7ನೇ ವರ್ಷದ ವಾರ್ಷಿಕೋತ್ಸವವು ಇಂದು ಬೆಳಿಗ್ಗೆ ನಡೆಯಲಿದೆ.

ಬೆಳಿಗ್ಗೆ 5.10 ರಿಂದ 6.10ಕ್ಕೆ ಧ್ವಜಾರೋಹಣ 6.30ರಿಂದ ಗಣಪತಿ ಪೂಜೆ ನಂತರ ಪುಣ್ಯಾಹ, ನಂದಿಪೂಜೆ, ಅಮ್ಮನವರಿಗೆ ಅಭಿಷೇಕ ನಂತರ ಗಣಹೋಮ, ನವಗ್ರಹ ಹೋಮ, ದೇವಿ ಹೋಮ. ನಡೆಯಲಿದೆ. ಮಧ್ಯಾಹ್ನ 1ಕ್ಕೆ ಪ್ರಸಾದ ವಿತರಿಸಲಾಗುವದು ಎಂದು ಅಧ್ಯಕ್ಷರು, ಪರೋಹಿತರು ತಿಳಿಸಿದ್ದಾರೆ. ವಿವರಕ್ಕೆ 91089 33706, 96204 07621

## ನಂದಿಗುಡಿ : ಇಂದು ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ-ಬಸವಣ್ಣನ ತೇರು





ನಂದಿಗುಡಿ ಗ್ರಾಮದ ಆರಾಧ್ಯದೇವ ಶ್ರೀ ಬಸವೇಶ್ವರ ದೇವರ ರಥೋತ್ಸವ ಮತ್ತು ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವವು ಇಂದು ಬೆಳಿಗ್ಗೆ 9 ಗಂಟೆಯಿಂದ ಸಕಲ ವಾದ್ಯಗಳೊಂದಿಗೆ ವಿಜೃಂಭಣೆಯಿಂದ ನಡೆಯಲಿವೆ.

ರಥೋತ್ಸವದ ನಂತರ ಶ್ರೀ ಬಸವೇಶ್ವರ ರಥದ ಫಲಾಪುಷ್ಪಾಹಾರಗಳನ್ನು ಹರಾಜು ಮಾಡಲಾಗುವುದು. ಸಂಜೆ ದೊಡ್ಡ ಬಂಡಿಗಳ ಪ್ರದರ್ಶನ ಬಳಿಕ ಓಕಳಿ, ಕಂಕಣ ವಿಸರ್ಜನೆ ಮಾಡಲಾಗುವುದು.

ಸೋಮವಾರ ಬೆಳಿಗ್ಗೆ 8 ಗಂಟೆಯಿಂದ ಶ್ರೀ ಬಸವೇಶ್ವರ ಪಾಲಿಕೆ ಉತ್ಸವದೊಂದಿಗೆ ಬುಕ್ಕಿಟ್ಟಿನ ಸೇವೆ ನೆರವೇರಲಿದೆ.

## ಬಿ. ಈರಣ್ಣ ವೀರಣ್ಣನವರ್ ನಿಧನ



ದಾವಣಗೆರೆ ಸಿಟಿ, ದೇವರಾಜ್ ಅರಸು ಬಡಾವಣೆ 'ಸಿ' ಬ್ಲಾಕ್
ಕೊಂಡಜ್ಜಿ ರಸ್ತೆ, ಹತ್ತಿರದ ವಾಸಿ

**ಬಿ. ಈರಣ್ಣ ವೀರಣ್ಣನವರ್ (65)**

**ಮಾಲೀಕರು, ಅರ್ಚನ ಟೈಲರ್ಸ್, ಕೆ.ಆರ್. ರಸ್ತೆ, ದಾವಣಗೆರೆ**

ಇವರು ದಿನಾಂಕ 08.03.2025ರ ಶನಿವಾರ ಮಧ್ಯಾಹ್ನ 3.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.03.2025ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ. : 70196 71832, 91416 15531**

## ಶ್ಯಾಬನೂರಿನಲ್ಲಿ ಇಂದು ರಥೋತ್ಸವ




ದಾವಣಗೆರೆ - ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಇಂದು ರಾತ್ರಿ 12 ಗಂಟೆಗೆ ಜರುಗಲಿದೆ.

ನಾಳೆ ಸೋಮವಾರ ಬೆಲ್ಲದ ಬಂಡಿ ಉತ್ಸವ ಏರ್ಪಾಡಾಗಿದೆ. ದಿನಾಂಕ 11ರ ಮಂಗಳವಾರ ಓಕುಳಿ ಕಾರ್ಯಕ್ರಮ ನಡೆಯಲಿದೆ.

॥ ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಕುಂಬಾರಪೇಟೆ, ಹಗೇದಿಬ್ಬ ಸರ್ಕಲ್ ವಾಸಿ **ಶ್ರೀ ನವೀನ್ ತೆಲಿಗಿ,** ವರ್ತಕರು
**ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ : 02.03.2025ನೇ ಭಾನುವಾರ ಬೆಳಗಿನ ಜಾವ 2.30ಕ್ಕೆ ನನ್ನ ಪೂಜ್ಯ ತಂದೆಯವರಾದ

**ಶ್ರೀ ತೆಲಿಗಿ ಮಂಜುನಾಥ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
**ದಿನಾಂಕ 10.03.2025ನೇ ಸೋಮವಾರ ಬೆಳಿಗ್ಗೆ 10.30ಕ್ಕೆ**
ದಾವಣಗೆರೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ಕವಿತಾ, ದಿ. ಶ್ರೀ ತೆಲಿಗಿ ಸೋಮಶೇಖರಪ್ಪ ಮತ್ತು ಮಕ್ಕಳು
ಶ್ರೀಮತಿ ಸುನಂದ, ಶ್ರೀ ನವೀನ್ ತೆಲಿಗಿ ಮತ್ತು ಮಕ್ಕಳು
ಡಾ. ನೀತು ತೆಲಿಗಿ, ಡಾ. ಮಿಥುನ್ ಕೆ.ಹೆಚ್. ಮತ್ತು ಮಕ್ಕಳು
ತೆಲಿಗಿ ವಂಶಸ್ಥರು, ದಾವಣಗೆರೆ. ಬಸಪ್ಪರ ವಂಶಸ್ಥರು, ಗಾಂಧಿನಗರ,
ದಾವಣಗೆರೆ ತಾ. ಹಾಗೂ ಬಂಧು-ಮಿತ್ರರು. 99001 55898

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**WANTED**
**FULL TIME**
ACCOUNTANT
3 years Tally Experience
ASSISTANT ACCOUNTANT
Tally Experience
BILLING
Computer Knowledge
APPLY WITH BIO-DATA IMMEDIATELY
**SHANTHALA**
CHAMARAJPET, DAVNANGERE
Contact No : 96861 95328
96861 95323

## ನೀಲಾನಹಳ್ಳಿ ಶ್ರೀ ಆಂಜನೇಯ ಕಾರಣಿಕ

ದಾವಣಗೆರೆ, ಮಾ. 8 - ತಾಲ್ಲೂಕಿನ ನೀಲಾನಹಳ್ಳಿ ಜಾತ್ರೋತ್ಸವದ ಅಂಗವಾಗಿ ಇಂದು ನಡೆದ ಕಾರಣಿಕ ಮಹೋತ್ಸವದಲ್ಲಿ ಶ್ರೀ ಆಂಜನೇಯ ಸ್ವಾಮಿ, ದೊಡ್ಡಬಾತಿಯ ಶ್ರೀ ಬೀರಲಿಂಗೇಶ್ವರ ದೇವರುಗಳು ಭಾಗವಹಿಸಿದ್ದವು. ನುಡಿದಂತೆ ನಡೆಯುವ ಕಾರಣಿಕವು ಇದಾಗಿದೆ.

**ರಾಮು ರಾಮು : ನರಲೋಕದ ಜನಕ್ಕೆ ಚಿನ್ನದ ಕಿರೀಟ ಇಟ್ಟರು ಮುತ್ತೈದೆಯರು**
**ಮುತ್ತಿನ ರಾಶಿ ಪೂಜೆ ಮಾಡ್ಯಾರು ವರುಣನ ಆರ್ಭಟ ಹೆಚ್ಚಾದೀತು ಎಚ್ಚರ.**

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ, ಬಂಬೂಬಜಾರ್ ವಾಸಿ
**ಜಾಲಿಮರದ ಶ್ರೀ ವೀರಣ್ಣ ಮತ್ತು ಸಹೋದರರು**
ಮಾಡುವ ವಿಜ್ಞಾಪನೆಗಳು.
ದಿನಾಂಕ 17.02.2025ನೇ ಸೋಮವಾರ ಬೆಳಿಗ್ಗೆ ನಮ್ಮ ಸಹೋದರನಾದ

**ಶ್ರೀ ಡಾ. ಜೆ.ಎನ್. ಕರಿಬಸಪ್ಪನವರು**

ಕಾರ್ಯದರ್ಶಿಗಳು, ಶ್ರೀ ವೀರೇಶ್ವರ ಪುಣ್ಯಾಶ್ರಮ ದಾವಣಗೆರೆ
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ: 9.3.2025ನೇ ಭಾನುವಾರ ಬೆಳಿಗ್ಗೆ ಶ್ರೀ ವೀರೇಶ್ವರ ಪುಣ್ಯಾಶ್ರಮ ಬಾಡಾ ಕ್ರಾಸ್, ದಾವಣಗೆರೆಯಲ್ಲಿ ಗುರು-ಹಿರಿಯರು ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಜೆ.ಕೆ. ಸುಧಾ**
**ಶ್ರೀ ಜೆ.ಎನ್. ವೀರಣ್ಣ ಮತ್ತು ಸಹೋದರರು ಹಾಗೂ ಕುಟುಂಬಸ್ಥರು**

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas